ಸಂಪುಟ : 4 ಸಂಚಿಕೆ : 07 ಪುಟ : 4 ಬೆಲೆ : ರೂ. 4 ಬುಧವಾರ, ಫೆಬ್ರವರಿ. 15. 2023 E-mail: newsbelagavi@gmail.com Mobile No-9900332089

ಬೆಳಗಾವಿ ಮತ್ತು ಬೆಂಗಳೂರಿನಿಂದ ಏಕ ಕಾಲದಲ್ಲಿ ಪ್ರಕಟಿತ



# ಬೆಳಗಾವಿ ವರದಿ

BELAGAVI VARADI KANNADA DAILY

ಕರ್ನಾಟಕ ಕನ್ನಡ ದಿನಪತ್ರಿಕೆ

ಸಂಪಾದಕರು : ಸತೀಶ್.ಬಿ.ಜಿ

Volume : 4 Issue : 07 Pages : 4 Rate : 4 Rs Wednesday, February 15. 2023 RNI : KARKAN/2020/79084 Post Regn.No:G-2/PMG/KA/NK/BM/139/2021-23 belagavivaradi@gmail.com

## ಬೆಂಗಳೂರಿನಲ್ಲಿ ಅಮೆರಿಕಾ ವೀಸಾ ಕಚೇರಿ ತೆರೆಯುವ ಅಗತ್ಯವಿದೆ: ಸಿಎಂ



ಬೆಂಗಳೂರು: ಭಾರತದಲ್ಲಿರುವ ಅಮೆರಿಕದ ರಾಯಭಾರಿ ಎಲಿಜೆಬೆತ್ ಜೋನ್ಸ್ ಹಾಗೂ ಚೆನ್ನೈನಲ್ಲಿರುವ ಕಾನ್ಸುಲ್ ಜನರಲ್ ಜೂಡಿತ್ ರೇವಿನ್ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಮಾತನಾಡಿದ ಸಿಎಂ, ಬೆಂಗಳೂರಿನಲ್ಲಿ ಅಮೆರಿಕಾ ವೀಸಾ ಕಚೇರಿ ತೆರೆಯುವ ಅಗತ್ಯವಿದೆ ಎಂದು ತಿಳಿಸಿದರು.

ಪ್ರಸ್ತುತ ವೀಸಾ ಕಚೇರಿ ಚೆನ್ನೈನಲ್ಲಿರುವುದರಿಂದ ಬೆಂಗಳೂರಿನಿಂದ ಅಮೆರಿಕಕ್ಕೆ ಪ್ರಯಾಣಿಸುವವರಿಗೆ ತೊಂದರೆಯಾಗುತ್ತಿದೆ. ಪ್ರತಿನಿತ್ಯ ವಿದೇಶಿಗರು ಸೇರಿದಂತೆ 5 ಸಾವಿರಕ್ಕೂ ಹೆಚ್ಚು ಜನ ಅಮೆರಿಕಕ್ಕೆ ಪ್ರಯಾಣ ಬೆಳೆಸುವುದರಿಂದ , ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಬೆಂಗಳೂರಿನಲ್ಲಿ ವೀಸಾ ಕಚೇರಿಯನ್ನು ತೆರೆಯುವಂತೆ ಆಗ್ರಹಿಸಿದರು.

ಬೆಂಗಳೂರಿನಲ್ಲಿರುವ ಅಮೇರಿಕದ ಸಂಸ್ಥೆಗಳಿಗೆ ಎಲ್ಲ ಅಗತ್ಯ ಸಹಕಾರವನ್ನು ರಾಜ್ಯ ಸರ್ಕಾರ ಒದಗಿಸುತ್ತಿದ್ದು, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಹಾಗೂ ಉದ್ದಿಮೆಗಳನ್ನು ಸ್ಥಾಪಿಸಲು ಅತ್ಯುತ್ತಮ ವಾತಾವರಣವಿದೆ. ಹಾಗಾಗಿ, ವಿದೇಶಿ ಬಂಡವಾಳ ಹೂಡಿಕೆ ರಾಜ್ಯದಲ್ಲಿ ಹೆಚ್ಚಾಗಿದೆ. ಬೆಂಗಳೂರು ಭವಿಷ್ಯದ ನಗರ. ಆದ್ದರಿಂದ ಬೆಂಗಳೂರಿನಲ್ಲಿ ವೀಸಾ ಕಚೇರಿಯ ಅಗತ್ಯವಿದೆ ಎಂದು ಮುಖ್ಯಮಂತ್ರಿಗಳು ಮನವರಿಕೆ ಮಾಡಿಕೊಟ್ಟರು.

ಬೆಂಗಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ, ಇನ್ವೆಸ್ಟ್ ಕರ್ನಾಟಕ ಸೇರಿದಂತೆ ಹಲವಾರು ಅಂತರರಾಷ್ಟ್ರೀಯ ಮಟ್ಟದ ಸಮಾವೇಶ ಹಾಗೂ ವಿಚಾರಸಂಕಿರಣಗಳು ನಡೆಯುತ್ತಲೇ ಇರುತ್ತವೆ. ಅಂತರರಾಷ್ಟ್ರೀಯ ಗಣ್ಯರು ಇವುಗಳಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸುತ್ತಾರೆ. ಬೆಂಗಳೂರು ಸ್ಟಾರ್ಟ್ ಅಪ್ ಕ್ಯಾಪಿಟಲ್ ಆಗಿದ್ದು, ದೇಶದಲ್ಲಿಯೇ ಅತಿ ಹೆಚ್ಚಿನ ಯೂನಿಕಾರ್ನ್ ಗಳಿಗೆ ತವರು. ಇಲ್ಲಿ ಉದ್ಯೋಗಾವಕಾಶಗಳು ಹೇರಳವಾಗಿವೆ. ಏರೋಸ್ಪೇಸ್ ಹಾಗೂ ರಕ್ಷಣಾ ವಲಯದಲ್ಲಿಯೂ ಕರ್ನಾಟಕ ಮುಂಚೂಣಿಯಲ್ಲಿದ್ದು, ವಿಮಾನದ ಬಿಡಿಭಾಗಗಳ ಉತ್ಪಾದನೆಗೂ ಗುರಿಯನ್ನು ಹೊಂದಿದೆ ಎಂದರು.

ನವದೆಹಲಿಯಲ್ಲಿರುವ ಅಮೆರಿಕದ ರಾಯಭಾರಿ ಎಲಿಜೆಬೆತ್ ಜೋನ್ಸ್ ಮಾತನಾಡಿ, ಭಾರತದ ಸಿಲಿಕಾನ್ ವ್ಯಾಲಿ ಬೆಂಗಳೂರಿಗೆ ಇದು ತಮ್ಮ ಮೊದಲ ಭೇಟಿಯಾಗಿದ್ದು, ಅಮೆರಿಕ– ಭಾರತದ ವಾಣಿಜ್ಯ ಸಹಭಾಗಿತ್ವವನ್ನು ಮುನ್ನಡೆಸುವಲ್ಲಿ ಕರ್ನಾಟಕ ಮಹತ್ವದ ಪಾತ್ರವಹಿಸುತ್ತದೆ ಎಂದರು.

ಇಲ್ಲಿ 650 ಕ್ಕೂ ಹೆಚ್ಚು ಅಮೆರಿಕನ್ ಕಂಪನಿಗಳಿವೆ, ಇವುಗಳಿಂದ ಅಮೆರಿಕ ಮತ್ತು ಭಾರತದಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗುತ್ತಿವೆ. ಭಾರತ ಮತ್ತು ಅಮೆರಿಕದ ಆರ್ಥಿಕತೆಗಳು ಹಲವಾರು ರೀತಿಯಲ್ಲಿ ಬೆಸೆದುಕೊಂಡಿದೆ. ಅಮೆರಿಕ ಮತ್ತು ಕರ್ನಾಟಕದ ನಡುವಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಉತ್ಸುಕರಾಗಿರುವುದಾಗಿ ತಿಳಿಸಿದ ಅವರು, ಆವಿಷ್ಕಾರ ಕ್ರಮಾಂಕದಲ್ಲಿ ಮತ್ತೊಮ್ಮೆ ಮೊದಲ ಸ್ಥಾನ ಪಡೆದಿರುವುದಕ್ಕೆ ಮುಖ್ಯಮಂತ್ರಿಗಳನ್ನು ಅಭಿನಂದಿಸಿದರು.

ಟೆಜೂರಿ ಕಪ್ಪಾಟ್ಟ್ ರಿಪೇರಿ ಪೆಂಟಿಂಗ್ ಆಲ್ ಟೈಪ್ ಆಫ್ ಪಾಬ್ರಿಕೇಷನ್ ವರ್ಕ್ ಶಾಪುರ್ ಬೆಳಗಾವಿ ಸಂಪರ್ಕಿಸಿ:7349155671

Teesri kapat repair and painting all type of fabrication work corporation complex shapur Belagavi hare Krishna contact 7349 155671

## ಕೊಡಗು: ಇಬ್ಬರನ್ನು ಬಲಿಪಡೆದಿದ್ದ ಹುಲಿ ಸೆರೆ



ಕೊಡಗು: ಇಬ್ಬರನ್ನು ಬಲಿಪಡೆದಿದ್ದ ನರಭಕ್ಷಕ ಹುಲಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಫೆ.12 ರಂದು 24 ಗಂಟೆಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಗೆ ಇಬ್ಬರು ಸಾವನ್ನಪ್ಪಿದ್ದರು.

ಪೊನ್ನಂಪೇಟೆ ತಾಲೂಕಿನ ನಾಣಚ್ಚಿಗೇಟ್ ಬಳಿ ಅರಣ್ಯ ಇಲಾಖೆ ಸಿಬ್ಬಂದಿ ಹುಲಿಯನ್ನು ಸೆರೆ ಹಿಡಿದಿದ್ದಾರೆ. ದಸರಾ ಆನೆ ಅಭಿಮನ್ಯು ನೇತೃತ್ವದಲ್ಲಿ ಅಶ್ವತ್ಥಾಮ, ಭೀಮ, ಗಣೇಶ ಆನೆಗಳನ್ನು ಬಳಸಿ ಹುಲಿ ಸೆರೆ ಕಾರ್ಯಾಚರಣೆಯನ್ನು ನಡೆಸಲಾಗಿತ್ತು. ಅರವಳಿಕೆ ಚುಚ್ಚು ಮದ್ದು ನೀಡಿ ಹುಲಿಯನ್ನು ಸೆರೆ ಹಿಡಿಯಲಾಗಿದೆ.

ಸೆರೆ ಹಿಡಿಯಲಾಗಿರುವ ಹುಲಿ 11–13 ವರ್ಷದ ಹೆಣ್ಣು ಹುಲಿಯಾಗಿದ್ದು, ವಿರಾಜಪೇಟೆ ವಿಭಾಗದ ಅರಣ್ಯ ಇಲಾಖೆಯ 150 ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಮಧ್ಯಾಹ್ನದ ಅವಧಿಯಲ್ಲಿ ನಾಣಚ್ಚಿಗೇಟ್ ಬಳಿ ಹುಲಿ ಕಾಣಿಸಿಕೊಂಡಿತ್ತು ತಕ್ಷಣವೇ ತಜ್ಞ ಡಿಆರ್‌ಎಫ್‌ಒ ರಂಜನ್ ಹುಲಿಗೆ ಅರವಳಿಕೆ ನೀಡಿ ಶಾಂತಗೊಳಿಸುವ ಪ್ರಕ್ರಿಯೆ ಪ್ರಾರಂಭಿಸಿದರು. ಸೆರೆಯಾಗಿರುವ ಹುಲಿಗೆ ಕಾಲು ಸೇರಿದಂತೆ ದೇಹದ ಹಲವು ಭಾಗಗಳಲ್ಲಿ ಗಾಯಗಳಾಗಿದ್ದು, ಮತ್ತೊಂದು ಹುಲಿಯೊಂದಿಗೆ ಕಾದಾಡಿರುವ ಸಾಧ್ಯತೆ ಇದೆ ಎಂದು ನಾಗರಹೊಳೆ ವನ್ಯಜೀವಿ ವಿಭಾಗದ ಎಸಿಎಫ್ ಗೋಪಾಲ್ ಹೇಳಿದ್ದಾರೆ.

## ಸಂತ ಸೇವಾಲಾಲ ಮಹಾಮಠ ಪ್ರತಿಷ್ಠಾನಕ್ಕೆ 10 ಕೋಟಿ ರೂ. ಬಿಡುಗಡೆ; ಸಿಎಂ



ದಾವಣಗೆರೆ: ಶ್ರೀ ಸಂತ ಸೇವಾಲಾಲ ಮಹಾಮಠ ಪ್ರತಿಷ್ಠಾನಕ್ಕೆ ಅನುದಾನ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಶ್ರೀ ಸಂತ ಸೇವಾಲಾಲ್ ಅವರ 284 ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ವಿಶೇಷ ವಸತಿ ಶಾಲೆ ಸುರಗೊಂಡನಗೊಪ್ಪ ಇಡೀ ದೇಶಕ್ಕೆ ತಿಳಿಯಬೇಕು, ಸಮಗ್ರವಾಗಿ ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಹಕ್ಕುಪತ್ರಗಳನ್ನು ನೀಡಿರುವ ಗ್ರಾಮಗಳಲ್ಲಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಳ್ಳಲು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಲಿಡ್ಕರ್ ಮಾದರಿ ಕಾರ್ಯಕ್ರಮವನ್ನು ರೂಪಿಸಲಾಗುವುದು. ಈ ಸಮಾಜದ ಮಕ್ಕಳು ಶಿಕ್ಷಣವನ್ನು ಪಡೆಯಲು ಸರ್ಕಾರ ಸಂಪೂರ್ಣ ಬೆಂಬಲ ನೀಡುತ್ತದೆ. ಈ ಸಮುದಾಯದ ವಸತಿ ಹೆಚ್ಚಿರುವಲ್ಲಿ ವಿಶೇಷ ವಸತಿ ಶಾಲೆಗಳನ್ನು ನಿರ್ಮಿಸಲಾಗುವುದು ಎಂದರು. ಕೊಪ್ಪಳದ ಬಹದ್ದೂರ್ ಬಂಡೆಯಲ್ಲಿ ಹೆರಿಟೇಜ್ ವಿಲೇಜ್, ಬೀದರ್ ಜಿಲ್ಲೆಯಲ್ಲಿ ಕೌಶಲ್ಯ ತರಬೇತಿ ನೀಡುವ ಕಾರ್ಯಕ್ರಮವನ್ನು ತಾಂಡಾ ಅಭಿವೃದ್ಧಿ ನಿಗಮದಿಂದ ವಿಶೇಷ ಅನುದಾನ ನೀಡಲಾಗುವುದು ಎಂದು ಭರವಸೆಯಿತ್ತರು.

**ವೈಶಿಷ್ಟ್ಯಪೂರ್ಣ ಬಂಜಾರ ಸಮಾಜ :**

ಶ್ರೀ ಸಂತ ಸೇವಾಲಾಲರು ನ್ಯಾಮತಿಯಲ್ಲಿ ಹುಟ್ಟಿ, ಸಮಾಜವನ್ನು ಜಾಗೃತಗೊಳಿಸಿ, ತಮ್ಮ ಸಿದ್ಧಾಂತಗಳನ್ನು ಜನರಿಗೆ ಮುಟ್ಟಿಸಿ ಬದುಕುವ ದಾರಿಯನ್ನು ತೋರಿಸಿದ್ದಾರೆ. ಸತ್ಯವನ್ನು ನುಡಿಯಿರಿ, ಪ್ರಾಣಿ ಹಿಂಸೆ ಮಾಡದಿರಿ, ದಯೆಯೇ ಧರ್ಮ, ದುಡಿಮೆಯಿಂದ ಬದುಕು ಎಂಬ ಮಂತ್ರಗಳಿಂದ ಈ ಸಮಾಜವನ್ನು ಉದ್ಧಾರ ಮಾಡುವ ಕೆಲಸ ಮಾಡಿದ್ದಾರೆ. ಅವರ ವಿಚಾರಧಾರೆಗಳು ಇಂದಿಗೂ ಪ್ರಸ್ತುತ. ಬಂಜಾರ ಸಮಾಜ ವೈಶಿಷ್ಟ್ಯಪೂರ್ಣ ಸಮಾಜವಾಗಿದ್ದು, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ವ್ಯಾಪಿಸಿದೆ. ಧಾರವಾಡದಲ್ಲಿ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಪಡೆಯಲು 200 ಎಸ್ ಸಿ ಮಕ್ಕಳ ಆಯ್ಕೆಯಲ್ಲಿ 98 ಜನ ಬಂಜಾರ ಸಮುದಾಯಕ್ಕೆ ಸೇರಿದವರಾಗಿದ್ದಾರೆ. 14 ಜನ ನ್ಯಾಯಾಧೀಶರ ನೇಮಕಾತಿಯಲ್ಲಿ 6 ಜನ ಈ ಸಮುದಾಯದವರಾಗಿದ್ದಾರೆ. ಎಲ್ಲ ರಂಗದಲ್ಲಿ ಅಭಿವೃದ್ಧಿಹೊಂದುವ ಬಂಜಾರ ಸಮುದಾಯಕ್ಕೆ ಸಮಾನ ಅವಕಾಶಗಳು ದೊರೆಯಬೇಕಿದೆ. ಕಳೆದ ಹಲವು ದಶಕಗಳ ಬೇಡಿಕೆಯಾಗಿದ್ದ ಎಸ್ ಸಿ ಎಸ್ ಟಿ ಮೀಸಲಾತಿಯನ್ನು 15 ರಿಂದ ಶೇ.17 ಮತ್ತು ಎಸ್. ಟಿ.ಗೆ 3 ರಿಂದ ಶೇ.17ಕ್ಕೆ ಹೆಚ್ಚಿಸಿರುವುದು ನಮ್ಮ ಸರ್ಕಾರ. ಇದರಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ದೊಡ್ಡ ಪ್ರಮಾಣದ ಅವಕಾಶಗಳು ದೊರೆಯಲಿವೆ ಎಂದರು.

**ಮಾರ್ಚ್ ನಲ್ಲಿ 52 ಸಾವಿರ ಜನರಿಗೆ ಹಕ್ಕುಪತ್ರ**

ತಾಂಡಾ ಅಭಿವೃದ್ಧಿ ನಿಗಮದಿಂದ 960 ಕೋಟಿ ರೂ.ಗಳನ್ನು ನಿಮಗಕ್ಕೆ ನೀಡಿದ್ದು, ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ 52 ಸಾವಿರ ಜನರಿಗೆ ಹಕ್ಕುಪತ್ರವನ್ನು ಇತ್ತೀಚೆಗೆ ಪ್ರಧಾನಿಗಳಿಂದ ಕೊಡಿಸಲಾಗಿದೆ. ಮಾರ್ಚ್ ತಿಂಗಳಲ್ಲಿ ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಬಳಿ ಗೊಲ್ಲರಹಟ್ಟಿ, ಕುರುಬರಹಟ್ಟಿ, ಲಂಬಾಣಿ ತಾಂಡಾಗಳಿಗೆ ಇನ್ನೂ 52 ಸಾವಿರ ಜನರಿಗೆ ಹಕ್ಕು ಪತ್ರ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

## 114 ಖಾಸಗಿ ಶಾಲಾ ಕಾಲೇಜುಗಳಿಗೆ ಅನುದಾನಕ್ಕೆ ನಕಾರ



ಬೆಂಗಳೂರು: ರಾಜ್ಯದ ಆರ್ಥಿಕ ಸ್ಥಿತಿ ಸದೃಢವಾಗಿದೆ ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೇಳಿಕೆ ನಡುವೆಯೇ 114 ಖಾಸಗಿ ಶಾಲಾ–ಕಾಲೇಜುಗಳಿಗೆ ಅನುದಾನ ನೀಡುವ ಪ್ರಸ್ತಾವನೆಯನ್ನು ತಿರಸ್ಕರಿಸಿದ ರಾಜ್ಯ ಹಣಕಾಸು ಇಲಾಖೆ ವಿರುದ್ಧ ವಿಧಾನಪರಿಷತ್ ಸದಸ್ಯರು ತೀವ್ರವಾಗಿ ಕಿಡಿಕಾರಿದರು.

1986–87ರಿಂದ 1994–95ರ ಅವಧಿಯಲ್ಲಿ ಆರಂಭವಾದ ಕನ್ನಡ ಮಾಧ್ಯಮ ಶಾಲೆಗಳು ನಿರಂತರವಾಗಿ ನಡೆಯುತ್ತಿದ್ದು, ಈ ಶಾಲೆಗಳಿಗೆ ಅನುದಾನ ನೀಡಬೇಕು ಎಂದು ಬಿಜೆಪಿಯ ಪುಟ್ಟಣ್ಣ, ಜೆಡಿಎಸ್‌ನ ಮರಿತಿಬ್ಬೇಗೌಡ, ಕಾಂಗ್ರೆಸ್‌ನ ನಾಗರಾಜ್ ಯಾದವ್ ಒತ್ತಾಯಿಸಿದರು. ಸದನದ ಬಾವಿಗಿಳಿದು ಪ್ರತಿಭಟಿಸಲು ಆರಂಭಿಸಿದರು.

ಮತ್ತೊರ್ವ ಬಿಜೆಪಿ ಸದಸ್ಯ ಎಸ್ ವಿ ಸಂಕನೂರು ಕೂಡ ವಾಗ್ದಾಳಿ ನಡೆಸಿ, ಹಣಕಾಸು ಇಲಾಖೆಯ ನಕಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಮಾಡಿದ ಅವಮಾನವಾಗಿದೆ ಎಂದು ಹೇಳಿದರು.


ಶಿಕ್ಷಕರು, 29 ಗುಮಾಸ್ತರು ಸೇರಿದಂತೆ 547 ಸಿಬ್ಬಂದಿಗಳ ಹಿತ ಕಾಪಾಡಲು ವಿಫಲವಾದರೆ ಬಿಜೆಪಿಗೆ ಮುಖಭಂಗವಾಗಲಿದೆ ಎಂದು ಪುಟ್ಟಣ್ಣ ಅವರು ಹೇಳಿದರು.

ಬಜೆಟ್ ಭರವಸೆಗೆ ದ್ರೋಹ ಬಗೆದಿರುವ ಇಲಾಖೆಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಮುಖ್ಯ ಸಚೇತಕ ವೈ.ಎ.ನಾರಾಯಣಸ್ವಾಮಿ ಅವರು ಹೇಳಿದರು.

ಈ ವೇಳೆ ಮಾತನಾಡಿದ ಸದಸ್ಯರಾದ ಬೋಜೇಗೌಡ, ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಸಚಿವ ಬಿ.ಸಿ.ನಾಗೇಶ್, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರು ಮುಖ್ಯಮಂತ್ರಿ ಬೊಮ್ಮಾಯಿ ಅವರ ಬಳಿ ಸಮಸ್ಯೆ ಮಾಹಿತಿ ನೀಡುವುದಾಗಿ ಭರವಸೆ ನೀಡಿದರು.

ಜನವರಿ 19, 2023 ರಂದು ನೀಡಿದ ಆದೇಶದಲ್ಲಿ ರಾಜ್ಯ ಹಣಕಾಸು ಇಲಾಖೆಯು, ಸರ್ಕಾರವು ಅನುದಾನಿತ ಶಾಲೆಗಳು ಮತ್ತು ಕಾಲೇಜುಗಳ ಸಿಬ್ಬಂದಿಯ ವೇತನಕ್ಕಾಗಿ 1,800 ಕೋಟಿ ರೂ.ಗೂ ಹೆಚ್ಚು ಖರ್ಚು ಮಾಡುತ್ತಿರುವುದರಿಂದ, ಆದಾಯ ಕೊರತೆ ಮತ್ತು ಆರ್ಥಿಕ ಮುಗ್ಗಟ್ಟು ಉಂಟಾಗಬಹುದು ಎಂದು ಹೇಳಿ, ಅನುದಾನವನ್ನು ತಿರಸ್ಕರಿಸಿತ್ತು.

## ಈ ಬಾರಿ ಚುನಾವಣೆಯಲ್ಲಿ ಬಂಡೆ ಒಡೆಯತ್ತೆ, ಹುಲಿಯಾ ಕಾಡಿಗೆ ಹೋಗುತ್ತೆ; ಬಿಜೆಪಿ ರಾಜ್ಯಾಧ್ಯಕ್ಷ



ಕೊಪ್ಪಳ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ಗುಡುಗಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ವಿಧನಸಭೆ ಚುನಾವಣೆಯಲ್ಲಿ ಈಬಾರಿ ಬಂಡೆ ಒಡೆದು ಹೋಗುತ್ತೆ, ಹುಲಿಯಾ ಕಾಡಿಗೆ ಹೋಗುತ್ತೆ ರಾಜ್ಯದಲ್ಲಿ ಮತ್ತೆ ಕಮಲ ಅರಳುತ್ತೆ ಎಂದು ಭವಿಷ್ಯ ನುಡಿದಿದ್ದಾರೆ.

ಕೊಪ್ಪಳದಲ್ಲಿ ಜನಸಂಕಲಪ ಸಮಾವೇಶದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷರು, ಕಾಂಗ್ರೆಸ್ ನಾಯಕ ವಿರುದ್ಧ ಹಿಗ್ಗಾ ಮುಗ್ಗಾ ವಾಗ್ದಾಳಿ ನಡೆಸಿದ್ದಾರೆ. ಕತ್ತೆ ಕಥೆ ಹೇಳುವ ಮೂಲಕ ಕಾಂಗ್ರೆಸ್ ನಾಯಕರ ಟೀಕಿಸಿದ್ದಾರೆ.

ಒಂದು ದಿನ ಸೋನಿಯಾ ಗಾಂಧಿ ಮನೆ ಮುಂದೆ ಕತ್ತೆ ಮಲಗಿತ್ತು. ಅದನ್ನು ಮಲ್ಲಿಕಾರ್ಜುನ ಖರ್ಗೆ, ಅಜಾದ್ ಸೇರಿದಂತೆ ಯಾರಿಂದಲೂ ಓಡಿಸಲು ಆಗಿಲ್ಲ. ಆಗ ಸಿದ್ದರಾಮಯ್ಯ ಬಂದರು. ಸಿದ್ದರಾಮಯ್ಯ ಕತ್ತೆಗೆ ಕಾಂಗ್ರೆಸ್ ಗೆ ಸೇರ್ತಿಯಾ ಎಂದು ಕೇಳಿದರು. ಕಾಮ್ಗ್ರೆಸ್ ಸೇರ್ತಿಯಾ ಎಂದು ಕೇಳುತ್ತಿದ್ದಂತೆ ಕತ್ತೆ ಓಡಿ ಹೋಯ್ತು. ಕತ್ತೆಗೂ ಕೂಡ ಕಾಂಗ್ರೆಸ್ ಬೇಡವಾಗಿದೆ ಎಂದು ಲೇವಡಿ ಮಾಡಿದರು.

ಈ ಹಿಂದೆ ಕಾಂಗ್ರೆಸ್ ನಲ್ಲಿ ವಿದ್ಯುತ್ ಕಂಬ ನಿಲ್ಲಿಸಿದ್ರೂ ಗೆಲ್ಲುತ್ತಿತ್ತು. ಈಗ ಕ್ಷೇತ್ರ ಇಲ್ಲದೇ ರಾಹುಲ್ ಗಾಂಧಿ ಕೇರಳಕ್ಕೆ ಹೋಗಿದ್ದಾರೆ. ಕರ್ನಾಟಕದಲ್ಲಿ ಸಿದ್ದರಾಮಯ್ಯನವರಿಗೆ ಕ್ಷೇತ್ರ ಇಲ್ಲ, ಆದರೂ ಸಿದ್ದರಾಮಯ್ಯ ಈಗಾಗಲೇ ಮುಖ್ಯಮಂತ್ರಿ ಶರ್ಟ್ ಹೊಲಿಸಿ ಇಟ್ಟಿದ್ದಾರೆ. ಆದ್ರೆ ನನ್ನಪ್ಪನಾಣೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಲ್ಲ ಎಂದರು.

ಸಿದ್ದರಾಮಯ್ಯ ದೇವೇಗೌಡರ ಬಳಿ ಬೆಳೆದು ಅವರನ್ನೇ ತುಳಿದುವರು, ನಂತರ ಸೋನಿಯಾ ಗಾಂಧಿ ಕಾಲು ಹಿಡಿದು ಸಿಎಂ ಆದರು. ನನ್ನನ್ನೇ ಜೋಕರ್ ಅಂತಿರಾ? ನೀವು ನೀವು ಬ್ರೋಕರ್ ಆಗಿಯೇ ಮುಖ್ಯಮಂತ್ರಿ ಆಗಿದ್ದು ಎಂದು ಕಿಡಿಕಾರಿದ್ದಾರೆ.

ಇದೇ ವೇಳೆ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ ನಳೀನ್ ಕುಮಾರ್ ಕಟೀಲ್, ಡಿ.ಕೆ.ಶಿವಕುಮಾರ್ ಗೆ ಎರಡು ಕುಕ್ಕರ್ ಮೇಲೆ ತುಂಬಾ ಪ್ರೀತಿ. ಒಂದು ಮಂಗಳೂರು ಕುಕ್ಕರ್, ಇನ್ನೊಂದು ಬೆಳಗಾವಿ ಕುಕ್ಕರ್. ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟಿಸಿದವನನ್ನು ಅಮಾಯಕ ಅಂತಿದ್ದಾರೆ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಕುಟುಂಬ ಕಳ್ಳರ ಸಂತಾನ. ಡಿಕೆಶಿ ತಿಹಾರ್ ಜೈಲಿಗೆ ಹೋಗಿದ್ದು ಯಾಕೆ? ಎಂತಾ ಸಂತಾನ ರೀ ಇವರದ್ದು ಕಳ್ಳರ ಸಂತಾನ ಎಂದು ಹೇಳಿಕೆ ನೀಡಿದ್ದಾರೆ.

## ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದ ಬೆಸ್ಕಾಂ ಎಇ

ಬೆಂಗಳೂರು: ಲಂಚ ಪಡೆಯುತ್ತಿದ್ದಾಗ ಬೆಸ್ಕಾಂ ಎಇ ಯೊಬ್ಬರು ಲೋಕಾಯುಕ್ತ ಅಧಿಕಾರಿಗಳ ಕೈಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಸಂತೋಷ್ ಲೋಕಾಯುಕ್ತ ಬಲೆಗೆ ಬಿದ್ದ ಎಇ. ಬೆಂಗಳೂರಿನ ಹೆಚ್.ಎಸ್.ಆರ್ ಲೇಔಟ್ ನ ಬೆಸ್ಕಾಂ ಎಇ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಸಂತೋಷ್ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಸಂತೋಷ್ ನನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ.

## ನೇಪಾಳ ಪುನಃ ಹಿಂದೂರಾಷ್ಟ್ರವಾಗಿಸಲು ಮೆಗಾ ಅಭಿಯಾನ ಆರಂಭ

ಕಠ್ಮಂಡು: 'ಧರ್ಮ, ರಾಷ್ಟ್ರ, ರಾಷ್ಟ್ರೀಯತೆ, ಸಂಸ್ಕೃತಿ ಮತ್ತು ನಾಗರಿಕರನ್ನು ಉಳಿಸೋಣ' ಎಂಬ ಮೆಗಾ ಅಭಿಯಾನಕ್ಕೆ ನೇಪಾಳದ ಮಾಜಿ ರಾಜ ಜ್ಞಾನೇಂದ್ರ ಶಾ ಚಾಲನೆ ನೀಡಿದ್ದಾರೆ.

ಪೂರ್ವ ನೇಪಾಳದ ಝೂಪಾ ಜಿಲ್ಲೆಯ ಕಾಕರ್ಭಿಟ್ಟಾದಿಂದ ಬೃಹತ್ ಜನಸಮೂಹದ ಸಮ್ಮುಖದಲ್ಲಿ ಶಾ ಅವರು ಜನರ ಹರ್ಷೋದ್ಗಾರ ಮತ್ತು ಶ್ಲಾಘನೆಗಳ ಮಧ್ಯೆ 'ಧರ್ಮ, ರಾಷ್ಟ್ರ, ರಾಷ್ಟ್ರೀಯತೆ, ಸಂಸ್ಕೃತಿ ಮತ್ತು ನಾಗರಿಕರ ಮೆಗಾ ಅಭಿಯಾನವನ್ನು ಉಳಿಸೋಣ' ಅಭಿಯಾನಕ್ಕೆ ಚಾಲನೆ ನೀಡಿದರು. ಈ ವಿದ್ಯಮಾನ ದೇಶದ ಸ್ಥಾನಮಾನವನ್ನು ಹಿಂದೂ ಸಾಮ್ರಾಜ್ಯವಾಗಿ ಪುನಃಸ್ಥಾಪಿಸಲು ನಾಂದಿ ಹಾಡಿದೆ.

ನೇಪಾಳದ ಪ್ರಧಾನಿ ಪುಷ್ಪಕಮಲ್ ದಹಾಲ್ ಅವರು ಮಾವೋವಾದಿಗಳ ಯುದ್ಧದ 23 ವರ್ಷಗಳ ನೆನಪಿಗಾಗಿ ಸೋಮವಾರ 'ಪ್ರಚಂಡ' ಹೆಸರಿನಲ್ಲಿ ಸಾರ್ವಜನಿಕ ರಜಾದಿನ ಘೋಷಿಸಿದ ನಂತರ ಈ ಬೆಳವಣಿಗೆ ನಡೆದಿದೆ. ಇದೇ ವೇಳೆ ಶಾ ಅವರ ಪುತ್ರ ಪರಾಸ್, ಮಗಳು ಪ್ರೇರಣಾ ಮತ್ತು ಸೊಸೆ ಸಿತಾಶ್ಮಾ ಅವರು ಸ್ಥಳದಿಂದ ಸುಮಾರು 40 ಕಿಮೀ ದೂರದಲ್ಲಿರುವ ದಮಾಕ್‌ನಲ್ಲಿ ಆರು ವಾರಗಳಿಂದ ಬೀಡುಬಿಟ್ಟಿರುವ ಶಾ ಅವರನ್ನು ಸೇರಿಕೊಂಡರು. ಮಾಜಿ ಪ್ರಧಾನಿ ಕೆಪಿ ಒಲಿ ನೇತೃತ್ವದ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ–ಯುನಿಫೈಡ್ ಮಾರ್ಕ್ಸ್‌ವಾದಿ ಲೆನಿನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಸದಸ್ಯ ದುರ್ಗಾ ಪ್ರಸಾಯಿ ಈ ಅಭಿಯಾನವನ್ನು ಸಂಯೋಜಿಸುತ್ತಿದ್ದಾರೆ. ನೇಪಾಳದ ರಾಜಕೀಯ ಪಕ್ಷಗಳು 2008 ರಲ್ಲಿ ಹಿಮಾಲಯ ಸಾಮ್ರಾಜ್ಯದ 239 ವರ್ಷಗಳ ಹಿಂದೂ ರಾಜಪ್ರಭುತ್ವವನ್ನು ರದ್ದುಗೊಳಿಸಲು ಬಹುಮತ ಸೂಚಿಸಿ ಯಶಸ್ವಿಯಾಗಿದ್ದವು. ಅಲ್ಲಿಂದ ನೇಪಾಳ 'ಹಿಂದೂ ರಾಷ್ಟ್ರ'ದ ಸ್ಥಾನ ಕಳೆದುಕೊಂಡಿತ್ತು.

## ಕುಮಾರಸ್ವಾಮಿ ವಿರುದ್ಧ ಬ್ರಾಹ್ಮಣ ಸಮಾಜ ಕೆಂಡಾಮಂಡಲ




ಬೈಲಹೊಂಗಲ: ಉಪವಿಭಾಗಾಧಿಕಾರಿಗಳ ಮೂಲಕ ಮಾಜಿ ಮುಖ್ಯಮಂತ್ರಿಗಳಾದ ಎಚ್. ಡಿ ಕುಮಾರಸ್ವಾಮಿಯವರ ಮೇಲೆ ಕಾನೂನು ಕ್ರಮಕ್ಕೆಒತ್ತಾಯಿಸಿ ಬ್ರಾಹ್ಮಣ ಸಮಾಜದ ಬಾಂಧವರಿಂದ ಮನವಿ....

ಬ್ರಾಹ್ಮಣ ಸಮುದಾಯದ ಬಗ್ಗೆ ಬಹಿರಂಗ ವಾಗಿ ಅವಹೇಳನಕಾರಿ ಮಾತುಗಳನ್ನಾಡಿದ್ದು ಇದರಿಂದ ಸಮಾಜದ ಗೌರವಕ್ಕೆ ದಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಯಾವುದೇ ರಾಜಕೀಯ ನಾಯಕ–ರಿಂದ ಸಮಾಜಕ್ಕೆ ದಕ್ಕೆಯಾಗದಂತೆ ಸೂಕ್ತ ಎಚ್ಚರಿಕೆ ವಹಿಸುವಂತೆ ಮನವಿಯಲ್ಲಿ ತಿಳಿಸಿದ್ದು. ಈ ಮೂಲಕ ಮಾನ್ಯ ಮುಖ್ಯಮಂತ್ರಿ ಗಳಲ್ಲಿ ಮನವಿ ಮಾಡಿದ್ದಾರೆ.

ಈ ಸಂದರ್ಬದಲ್ಲಿ ಮಾತನಾಡಿದ ಬ್ರಾಹ್ಮಣ ಸಮಾಜದ ಮುಖಂಡರು ಬ್ರಾಹ್ಮಣ ಸಮಾಜ ಎಂದು ಯಾರಿಗೂ ಕೆಡಕು ಮಾಡಿಲ್ಲ ಕುಮಾರಸ್ವಾಮಿಯವರ ಇಂತಹ ಮಾತುಗಳಿಗೆ ಬ್ರಾಹ್ಮಣ ಸಮಾಜ ಎಂದು ಬಗ್ಗುವುದಿಲ್ಲ ರಾಜಕೀಯವಾಗಿ ಇಂಥ ವಿಚಾರಗಳಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವುದನ್ನು ಬಿಡಬೇಕು ಬ್ರಾಹ್ಮಣ ಸಮಾಜದವರನ್ನು ಸುಖ ಸುಮ್ಮನೆ ಕೆಣಕುವುದನ್ನು ನಿಲ್ಲಿಸಬೇಕು.

ಈ ರೀತಿ ಜಾತಿ ನಿಂದನೆ ಮಾಡುತ್ತಿರುವ ಕುಮಾರಸ್ವಾಮಿಯವರಿಗೆ ನಮ್ಮ ಧಿಕ್ಕಾರವಿದೆ ಚುನಾವಣೆ ಹತ್ತಿರ ಬಂದಿದೆ ಕುಮಾರಸ್ವಾಮಿ ಅವರಿಗೆ ನಾವು ಎಂದಿಗೂ ಬೆಂಬಲ ಸೂಚಿಸುವುದಿಲ್ಲ ಇಂಥವರ ಮೇಲೆ ಕಾನೂನು ಕ್ರಮ ಜರುಗಿಸಿದೆ ಹೋದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಈ ಮೂಲಕ ತಿಳಿಸಿದ್ದಾರೆ.

## ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚಿಸಲು ಕ್ರಮ: ಡಾ.ಕೆ.ಸುಧಾಕರ್




ಬೆಂಗಳೂರು: ಆಶಾ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸಲು ಕ್ರಮ ವಹಿಸಲಾಗುವುದು. ಎಷ್ಟು ಹೆಚ್ಚಿಸಬೇಕು ಎಂದು ತೀರ್ಮಾನ ಮಾಡಿ ಬಜೆಟ್‌ನಲ್ಲೇ ಘೋಷಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಶಿಕ್ಷಕರ ಸದನದಲ್ಲಿ, ಆಶಾ ಕಾರ್ಯಕರ್ತೆಯರ ರಾಜ್ಯಮಟ್ಟದ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವ ಡಾ.ಕೆ.ಸುಧಾಕರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮಂಡಿಸಿದ ತಮ್ಮ ಮೊದಲ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರಿಗೆ ಗೌರವಧನವನ್ನು 1,000 ರೂ. ಹೆಚ್ಚಿಸಿದ್ದಾರೆ. ಈ ಸಲ ಕೂಡ ಆಶಾ ಕಾರ್ಯಕರ್ತೆಯರ ಕೆಲ ಮನವಿಗಳನ್ನು ನೀಡಿದ್ದು, ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಲು ಕ್ರಮ ವಹಿಸಲಾಗುವುದು ಎಂದರು.

ಇತ್ತೀಚೆಗೆ ಬಜೆಟ್ ಕುರಿತು ಮುಖ್ಯಮಂತ್ರಿಯವರೊಂದಿಗೆ ಚರ್ಚೆ ನಡೆಯಿತು. ಈ ಚರ್ಚೆಯ ವೇಳೆ, ಆಶಾ ಕಾರ್ಯಕರ್ತೆಯರಿಗೆ ಗೌರವಧನವನ್ನು 2,000 ರೂ. ಹೆಚ್ಚಿಸಲು ಮನವಿ ಮಾಡಲಾಗಿದೆ. ಈ ಬಗ್ಗೆ ಮತ್ತೊಮ್ಮೆ ಮುಖ್ಯಮಂತ್ರಿಯವರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು. ಆಶಾ ಕಾರ್ಯಕರ್ತೆಯರಿಗೆ 5 ಕೋಟಿ ರೂ. ಮೊತ್ತದ ಕ್ಷೇಮಾಭಿವೃದ್ಧಿ ನಿಧಿ ಇರಿಸಿ, ಕಾರ್ಯಕರ್ತೆಯರ ಆರೋಗ್ಯ ರಕ್ಷಣೆಗೆ ನೀಡಬೇಕು ಎಂಬ ಬೇಡಿಕೆ ಬಂದಿದೆ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ತಾಂತ್ರಿಕ ನ್ಯೂನತೆ ನಿವಾರಿಸಿ, ಸರಿಯಾದ ಸಮಯಕ್ಕೆ ಗೌರವಧನ ನೀಡಲು ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದು ಅವರು ತಿಳಿಸಿದರು.

ಕೋವಿಡ್ ಸಮಯದಲ್ಲಿ ಅನೇಕರು ವರ್ಕ್ ಫ್ರಂ ಹೋಮ್ ಮಾಡಿದ್ದಾರೆ. ಆದರೆ ಆಶಾ ಕಾರ್ಯಕರ್ತೆಯರು ವರ್ಕ್ ಫ್ರಂ ಸ್ಟ್ರೀಟ್ ಮಾಡಿದ್ದರು. 10 ವರ್ಷಗಳ ಕಾಲ ಸೇವೆ ಸಲ್ಲಿಸಿದವರು ಅಥವಾ 60 ವಯಸ್ಸಿನ ಬಳಿಕ ನಿವೃತ್ತರಾಗಲು ಬಯಸಿದರೆ, ಅವರಿಗೆ ಇಡಿಗಂಟು ನೀಡಲು ಕ್ರಮ ವಹಿಸಬೇಕೆಂಬ ಬೇಡಿಕೆ ಇದೆ. ಈ ಬಗ್ಗೆ ಚರ್ಚಿಸಲಾಗುವುದು. ಕೇವಲ ಮಾತಿನಲ್ಲಲ್ಲ, ಕೃತಿಯ ಮೂಲಕ ಕೊಡುಗೆ ನೀಡಲಾಗುವುದು ಎಂದರು.

# ಸಂಪಾದಕೀಯ

## ಜನಪ್ರತಿನಿಧಿಗಳ ಬಾಯಿತುರಿಕೆ ಮಾತು ಇಷ್ಟು ಲಘುವಾದರೆ ಹೇಗೆ?

ರಾಜಕೀಯ ಎದುರಾಳಿಗಳನ್ನು ಹಳಿಯಲು ರಾಜಕಾರಣಿಗಳು ಬಳಸುತ್ತಿರುವ ಭಾಷೆ ಕೀಳು ಮಟ್ಟದ್ದಾಗಿದ್ದು, ರಾಜ್ಯದ ಸಂಸದೀಯ ವ್ಯವಸ್ಥೆಯ ನೈತಿಕ ಪತನದ ಸಂಕೇತದಂತಿದೆ. ಜನಪ್ರತಿನಿಧಿಯ ಮಾತುಗಳು ಸಾರ್ವಜನಿಕ ಸಭ್ಯತೆಯಿಂದ ಕೂಡಿರಬೇಕು ಹಾಗೂ ನಾಗರಿಕರಿಗೆ ಮಾದರಿಯಾಗಿರಬೇಕು. ಆದರೆ, ರಾಜ್ಯದ ರಾಜಕಾರಣಿಗಳು ಬೈದಾಡಿಕೊಳ್ಳಲು ಬಳಸುತ್ತಿರುವ ಭಾಷೆ ಕೊಳಕು ಅಭಿರುಚಿ ಯದ್ದಾಗಿದೆ ಹಾಗೂ ಅವರು ಪ್ರತಿನಿಧಿಸುವ ಸ್ಥಾನಗಳ ಮರ್ಯಾದೆ ಕಳೆಯುವಂತಿದೆ. 'ಹೊಟ್ಟೆಪಾಡಿಗೆ ಮೈಮಾರಿಕೊಂಡ ಮಹಿಳೆಗೆ ವೇಶ್ಯೆ ಎಂದು ಕರೆಯುತ್ತೇವೆ.

ತಮ್ಮನ್ನು ತಾವು ಮಾರಿಕೊಂಡು ಪಕ್ಷಾಂತರ ಮಾಡಿದ ಶಾಸಕರನ್ನು ಏನೆಂದು ಕರೆಯುತ್ತೀರಿ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಸಾರ್ವಜನಿಕ ಸಮಾರಂಭವೊಂದರಲ್ಲಿ ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಸಚಿವರಾದ ಬಿ.ಸಿ. ಪಾಟೀಲ ಹಾಗೂ ಮುನಿರತ್ನ ಅವರೂ ಹಗುರ ಮಾತುಗಳನ್ನು ಆಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ 'ಕ್ರಿಯೆ ಮತ್ತು ಪ್ರತಿಕ್ರಿಯೆ'ಯ ಪರಿಕಲ್ಪನೆಯ ರೂಪದಲ್ಲಿ ನೋಡಬಹುದಾದ ಈ ಬೈಗುಳದ ಪೈಪೋಟಿಯಲ್ಲಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ಮೂವರೂ ನಾಲಗೆಯನ್ನು ಸಡಿಲಬಿಟ್ಟಿದ್ದಾರೆ. ಸಾರ್ವಜನಿಕವಾಗಿ ತಮ್ಮ ವ್ಯಕ್ತಿತ್ವವನ್ನು ಬೆತ್ತಲು ಮಾಡಿಕೊಳ್ಳುವುದರ ಜೊತೆಗೆ, ವೇಶ್ಯಾವೃತ್ತಿಯಲ್ಲಿ ಇರುವವರಿಗೂ ಅವಮಾನ ಎಸಗಿದ್ದಾರೆ.

ಬಾಯಿತುರಿಕೆಯ ಈ ಭಾಷೆ ನಮ್ಮ ರಾಜಕಾರಣಿಗಳ ಲಿಂಗಸಂವೇದನೆ ಜಡ್ಡು ಗಟ್ಟಿರುವುದನ್ನು ಸೂಚಿಸುವಂತಿದೆ. ವೇಶ್ಯಾವೃತ್ತಿಯ ಹಿನ್ನೆಲೆಯಲ್ಲಿ ಇರಬಹುದಾದ ಬಡತನ, ಹಸಿವು, ಅಸಹಾಯಕತೆ ಹಾಗೂ ದೇಹಶೋಷಣೆಯ ಸಾಧ್ಯತೆಗಳ ಅರಿವು ಈ ನಾಯಕರಿಗೆ ಇದ್ದಂತಿಲ್ಲ. ಹೆಣ್ಣನ್ನು ಭೋಗದ ಸರಕನ್ನಾಗಿ ನೋಡುವ ಅಧಿಕಾರ ರಾಜಕಾರಣದ ನಿರ್ಲಜ್ಜೆಯನ್ನು ಇಂಥ ಮಾತುಗಳ ಹಿಂದೆ ಗುರುತಿಸಬಹುದು.

ಹರಿಪ್ರಸಾದ್ ಅವರು ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವುದರ ಬಗ್ಗೆ ಹೀನಾಯವಾಗಿ ಮಾತನಾಡಿರುವ ಬಿ.ಸಿ. ಪಾಟೀಲ, 'ಹಿಂಬಾಗಿಲಿನಿಂದ ಬಂದ ಇವರನ್ನು ಪಿಂಪ್ ಎನ್ನಬಹುದೇ' ಎಂದು ಪ್ರಶ್ನಿಸಿದ್ದಾರೆ. ಅವರ ಮಾತು ಅಸೂಕ್ಷ್ಮವಾದುದು ಹಾಗೂ ವಿಧಾನ ಪರಿಷತ್ತಿನ ಘನತೆಯನ್ನು ಅವಮಾನಿಸುವಂತಹದ್ದು. ಸಚಿವರೇ ಹೀಗೆ ಲಘುವಾಗಿ ಮಾತನಾಡುವುದಾದರೆ, ಜನ ಸಾಮಾನ್ಯರಿಗೆ ಸದನದ ಬಗ್ಗೆ, ಸದನದ ಸದಸ್ಯರ ಬಗ್ಗೆ ಗೌರವ ಉಳಿಯುವುದು ಹೇಗೆ ಸಾಧ್ಯ? ಮತದಾರರು ತಮ್ಮ ಬಗ್ಗೆ ಏನೆಂದುಕೊಳ್ಳಬಹುದು ಎಂಬ ಕನಿಷ್ಠ ಅಳುಕು ಕೂಡ ಜನಪ್ರತಿನಿಧಿಗಳನ್ನು ಕಾಡುವುದಿಲ್ಲವೇ?

ಸಚಿವ ಮುರುಗೇಶ ನಿರಾಣಿ ಹಾಗೂ ಆಡಳಿತ ಪಕ್ಷಕ್ಕೇ ಸೇರಿದವರಾದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಜಗಳ ಬೈಗುಳದ ಹಂತ ದಾಟಿ, ತಾಕತ್ತು ಪ್ರದರ್ಶಿಸುವ ಹಾಗೂ ಪರಸ್ಪರ ಬೆದರಿಸುವ ಮಟ್ಟಕ್ಕೆ ಹೋಗಿದೆ. ನಾಲಗೆ ಕತ್ತರಿಸುವುದಾಗಿ ಸಚಿವರೊಬ್ಬರು ಹೇಳುವುದಾದರೆ, ಅವರಿಗೆ ಈ ನೆಲದ ಕಾನೂನಿನ ಬಗ್ಗೆ ಇರುವ ಬದ್ಧತೆ–ಗೌರವವನ್ನು ಸಂದೇಹಿಸಬೇಕಾಗುತ್ತದೆ.

ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಯ ಹೆಸರನ್ನು ಬೈಗುಳದ ರೂಪದಲ್ಲಿ ಬಳಸುವುದಕ್ಕೂ ಜನಪ್ರತಿನಿಧಿಗಳು ಹೇಸುತ್ತಿಲ್ಲ. ರಾಜಕಾರಣಿಗಳು ದುಡುಕಿ ಮಾತನಾಡುವುದು ಹೊಸತೇನೂ ಅಲ್ಲ. ಆದರೆ, ಸಾರ್ವಜನಿಕ ಸಭ್ಯತೆಯನ್ನು ಲೆಕ್ಕಿಸದಂತೆ ಮಾತನಾಡುವ ಚಾಳಿ ಹೆಚ್ಚಾಗುತ್ತಿರುವುದು ಕಳವಳದ ಸಂಗತಿ. 'ಮಹಾತ್ಮ ಗಾಂಧಿ ಅವರ ಪಾದದ ದೂಳಿಗೆ ಜವಾಹರಲಾಲ್ ನೆಹರೂ ಅವರು ಸಮಾನರಾ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಪ್ರಶ್ನಿಸಿದ್ದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪಾದದ ದೂಳಿಗೂ ಸಿದ್ದರಾಮಯ್ಯ ಸಮಾನರಲ್ಲ ಎಂದು ಹೇಳಿದ್ದ ಬಿ.ಎಸ್. ಯಡಿಯೂರಪ್ಪ, ರಾಹುಲ್ ಗಾಂಧಿ ಅವರನ್ನು ಬಚ್ಚಾ ಎಂದೂ ಕರೆದಿದ್ದರು. ರಾಷ್ಟ್ರನಾಯಕರನ್ನೇ ಪಾದದ ದೂಳು ಹಾಗೂ ಬಚ್ಚಾ ರೂಪದಲ್ಲಿ ನೋಡುವವರ ಕಣ್ಣಿಗೆ ಜನಸಾಮಾನ್ಯರು ಹೇಗೆ ಕಾಣಿಸಬಹುದು? ಕೊರೊನಾ ಬಾಧೆಯ ಸಂದರ್ಭದಲ್ಲಿ, ಪಡಿತರ ಅಕ್ಕಿ ಕಡಿತಗೊಳಿಸಿರುವ ಸರ್ಕಾರದ ನಿರ್ಧಾರದಿಂದ ಆತಂಕಗೊಂಡು ದೂರವಾಣಿ ಕರೆ ಮಾಡಿದ್ದ ರೈತರೊಬ್ಬರು, 'ನಾವು ಉಪವಾಸ ಇರೋದಾ ಅಥವಾ ಸತ್ತುಹೋಗೋದಾ' ಎಂದು ಕೇಳಿದಾಗ, 'ಸತ್ತುಹೋದರೆ ಒಳ್ಳೆಯದು' ಎಂದು, ಆಹಾರ ಸಚಿವರಾಗಿದ್ದ ಉಮೇಶ ಕತ್ತಿ ಅವರು ಪ್ರತಿಕ್ರಿಯಿಸಿದ್ದು ವರದಿಯಾಗಿತ್ತು.

ಇಂಥ ನಡವಳಿಕೆಗಳ ಮೂಲಕ ಜನರೆದುರು ನಗೆಪಾಟಲಿಗೀಡಾಗುತ್ತಿದ್ದೇವೆ ಎನ್ನುವ ಪ್ರಜ್ಞೆ ಯಾರಿಗೂ ಇದ್ದಂತಿಲ್ಲ. ರಾಜಕಾರಣದಲ್ಲಿ ಆರೋಪ, ಪ್ರತ್ಯಾರೋಪ ಅಸಹಜವೇನಲ್ಲ. ಆದರೆ, ಈ ಮಾತುಕತೆ ಮತ್ತು ವಿರೋಧವು ತಾತ್ವಿಕ ನೆಲೆಗಟ್ಟಿನಲ್ಲಿರಬೇಕೇ ವಿನಾ ಗಂಟಲಬಲ ಅಥವಾ ದೇಹಬಲವನ್ನು ಅವಲಂಬಿಸಬಾರದು. ಸಚಿವರು, ಶಾಸಕರೇ ಕೊಳಕು ಮಾತುಗಳನ್ನಾಡಲು ನಿಂತರೆ, ಅವರ ಹಿಂಬಾಲಕರು ಹಾಗೂ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಲಗಾಮು ಇಲ್ಲದಂತಾಗುತ್ತದೆ. ಚುನಾವಣೆ ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ ರಾಜಕಾರಣಿಗಳ ಮಾತಿನ ವೀರಾವೇಶ ಹಾಗೂ ಕೆಸರೆರಚಾಟ ಏರುಮುಖ ದಲ್ಲಿದೆ.

ನಾಲಗೆ ಹರಿಯಬಿಟ್ಟು ಮಾತನಾಡುವ ಮೂಲಕ ತಮ್ಮ ರಾಜಕೀಯ ಅಸ್ತಿತ್ವ ತೋರಿಸಲು ಯತ್ನಿಸುತ್ತಿರುವ ರಾಜಕಾರಣಿಗಳೂ ಇದ್ದಾರೆ. ನಾಲಗೆಯ ಮೇಲೆ ನಿಯಂತ್ರಣವಿಲ್ಲದ ಹಾಗೂ ಮಾತಿನ ಸೂಕ್ಷ್ಮ ಅರಿಯದ ಈ ಜನ, ಶಾಲಾ ಮಕ್ಕಳಿಗೆ ನೈತಿಕ ಶಿಕ್ಷಣದ ಪಠ್ಯ ಗೊತ್ತುಪಡಿಸಲು ವಿಪರೀತ ಉತ್ಸಾಹ ವ್ಯಕ್ತಪಡಿಸುತ್ತಿರುವುದು ತಮಾಷೆಯಾಗಿದೆ. ನೈತಿಕ ಶಿಕ್ಷಣದ ತುರ್ತು ಇರುವುದು ಯಾರಿಗೆ ಎನ್ನುವ ಆತ್ಮಾವಲೋಕನ ಈಗ ಎಲ್ಲ ರಾಜಕೀಯ ಪಕ್ಷಗಳಿಗೂ ಅಗತ್ಯ.

# ಸಣ್ಣ -ಸಣ್ಣ ಸಮಾಜಗಳು ಒಂದಾಗಿ, ಒಗ್ಗಟ್ಟಾದರೇ ಮಾತ್ರ ಪ್ರಗತಿ ಸಾಧಿಸಲು ಸಾಧ್ಯ: ಶಾಸಕ ಬಾಲಚಂದ್ರ ಜಾರಕಿಹೊಳಿ




ಮೂಡಲಗಿ: ಕುಶಲಕರ್ಮಿಗಳು ಮತ್ತು ವಾಸ್ತುಶಿಲ್ಪಿಗಳ ಪ್ರಧಾನ ದೇವರಾಗಿರುವ ವಿಶ್ವಕರ್ಮನು ಜಗತ್ತಿನ ಸೃಷ್ಠಿಕರ್ತನೆಂದು ಶಾಸಕ, ಕೆಎಮ್‌ಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಮಂಗಳವಾರದಂದು ಪಟ್ಟಣದ ಬಸವ ಮಂಟಪದಲ್ಲಿ ಜರುಗಿದ ವಿರಾಟ ವಿಶ್ವಕರ್ಮ ಸಮಾಜದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಸೃಷ್ಟಿಯ ನಿರ್ಮಾಣದಲ್ಲಿ ವಿಶ್ವಕರ್ಮನ ಪಾತ್ರ ಮಹತ್ವರವಾಗಿದೆ ಎಂದು ತಿಳಿಸಿದರು.

ವಿಶ್ವಕರ್ಮನು ಬ್ರಹ್ಮಾಂಡದ ಪ್ರಧಾನ ವಾಸ್ತುಶಿಲ್ಪಿಯಾಗಿದ್ದಾನೆ. ಧರ್ಮ, ಪರಂಪರೆ ಉಳಿಯಲು ವಿಶ್ವಕರ್ಮರ ಕೊಡುಗೆ ಅನನ್ಯವಾಗಿದೆ. ವಿಶ್ವಕರ್ಮನು ಈ ಭೂಮಿಯಲ್ಲಿ ಪ್ರಥಮವಾಗಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ವಿಶ್ವದ ಮೊದಲ ವ್ಯಕ್ತಿ ಎಂದು ಬಣ್ಣಿಸಿದ ಅವರು, ಭೂಮಿ, ಬೆಳಕು, ಗಾಳಿ, ಜಲ, ಮತ್ತು ಆಕಾಶ ತ್ರಿಮೂರ್ತಿಗಳು ಯಾವುದು ಇಲ್ಲದಿದ್ದಾಗ ತನ್ನನ್ನು ತನ್ನಿಂದಲೇ ಸೃಷ್ಠಿಸಿಕೊಂಡನು ಎಂದು ವೇದ–ಪುರಾಣಗಳು ಹೇಳುತ್ತವೆ ಎಂದು ಹೇಳಿದರು.

ಹಿಂದುಳಿದ ವರ್ಗದಲ್ಲಿ ಸಣ್ಣ ಜನಾಂಗವಾಗಿರುವ ವಿಶ್ವಕರ್ಮ ಜನಾಂಗದವರು ಸಂಘಟಿತರಾಗಿ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಬೇಕು. ಸಾಮಾಜಿಕ ನ್ಯಾಯದ ತತ್ವದಡಿ ಅದು ಸಣ್ಣ ಸಮಾಜವಿರಲಿ, ದೊಡ್ಡ ಸಮಾಜವಿರಲಿ ಎಲ್ಲ ಸಮಾಜಗಳಿಗೆ ಸಾಮಾಜಿಕ ನ್ಯಾಯವನ್ನು ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇನೆ. ಅದರಂತೆ ಸಣ್ಣ ಸಮಾಜಗಳು ಸಹ ಮುಖ್ಯವಾಹಿನಿಗೆ ಬರಬೇಕು. ಒಗ್ಗಟ್ಟಿನಿಂದ ಸಂಘಟನೆ ನಡೆಯಬೇಕು. ಮುಂದಿನ ದಿನಗಳಲ್ಲಿ ಸಣ್ಣ–ಸಣ್ಣ ಸಮಾಜಗಳು ಒಂದಾಗಬೇಕು. ತಮ್ಮಗಳ ಶಕ್ತಿಯನ್ನು ತೋರಿಸಿಕೊಡಬೇಕು. ಒಗ್ಗಟ್ಟಾದರೇ ಮಾತ್ರ ರಾಜಕೀಯ ಅಧಿಕಾರ ಪಡೆಯಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿಶ್ವಕರ್ಮ ಸಮಾಜ ಬಾಂಧವರು ನಿವೇಶನವನ್ನು ಗುರುತಿಸಿಕೊಟ್ಟರೇ ಸರ್ಕಾರದಿಂದ ಸಭಾ ಭವನ ನಿರ್ಮಿಸಲು ಸಿದ್ದನಿದ್ದೇನೆ.

ಅಂದಾಜು 50ಲಕ್ಷ ರೂಗಳ ತನಕ ಅನುದಾನವನ್ನು ಈ ಸಮಾಜಕ್ಕೆ ನೆರವು ನೀಡುತ್ತೇನೆ. ಮೂಡಲಗಿಯ ಕಾಳಿಕಾದೇವಿ ದೇವಸ್ಥಾನದ ಅಭಿವೃದ್ದಿಗೆ 20ಲಕ್ಷ ರೂಗಳನ್ನು ನೀಡಲಾಗಿದೆ.

ಮುಂದಿನ ದಿನಗಳಲ್ಲಿಯೂ ಸಮಾಜಕ್ಕೆ ಅಗತ್ಯವಿರುವ ಎಲ್ಲ ಸಹಕಾರವನ್ನು ನೀಡಲಾಗುವುದು ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಶಿರಸಂಗಿ ವಿಶ್ವಕರ್ಮ ವಿಕಾಸ ಸಂಸ್ಥೆಯ ಅಧ್ಯಕ್ಷ ಪ್ರೋ.ಪಿ.ಬಿ.ಬಡಿಗೇರ ಮಾತನಾಡಿ, ವ್ಯಕ್ತಿಯಲ್ಲಿ ಪರೋಪಕಾರಿ, ಜನಸಾಮಾನ್ಯರ ನಾಡಿ ಮಿಡಿತ ಅರ್ಥ ಮಾಡಿಕೊಳ್ಳುವ ಸಂವೇಧನಾಶೀಲತೆ ಇರುವಂತಹ ಜನಪ್ರೀಯ ನೇತಾರರೇ ಬಾಲಚಂದ್ರ ಜಾರಕಿಹೊಳಿ ಅವರು. ನಮ್ಮ ಸಮಾಜವನ್ನು ಒಗ್ಗೂಡಿಸಿದ, ಸಂಘಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ನಮ್ಮ ಜನಾಂಗದವರ ಬುದ್ದಿವಂತಿಕೆಯು ನಮಗೆ ವರದಾನವಾಗಬೇಕಿತ್ತು. ಆದರೆ ನಮ್ಮಲ್ಲಿರುವ ಅಹಂಕಾರವೇ ನಮಗೆ ಶಾಪವಾಗಿ ಪರಿಣಮಿಸಿದೆ ಎಂದು ಹೇಳಿದರು.


ಪ್ರಧಾನಿ ನರೇಂದ್ರ ಮೋದಿ ಮತ್ತು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರು, ನಮ್ಮ ವಿಶ್ವಕರ್ಮ ಸಮಾಜವನ್ನು ಗುರುತಿಸಿವ ಕಾರ್ಯವನ್ನು ಮಾಡುತ್ತಿದ್ದಾರೆ. ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ನಮ್ಮ ಜನಾಂಗದ ಅಭಿವೃದ್ದಿಗೆ ಶ್ರಮಿಸುತ್ತಿರುವ ಬಾಲಚಂದ್ರ ಜಾರಕಿಹೊಳಿ ಅವರ ಬೆನ್ನಿಗೆ ಇಡೀ ಸಮಾಜವೇ ನಿಲ್ಲಬೇಕು. ಅವರ ದಾಖಲೆಯ ವಿಜಯಕ್ಕೆ ನಾವುಗಳು ಮುನ್ನುಡಿ ಬರೆಯಬೇಕೆಂದು ಸಮಾಜ ಬಾಂಧವರಲ್ಲಿ ಕೋರಿದರು.

ದಿವ್ಯ ಸಾನಿಧ್ಯ ಚಿಕ್ಕುಂಬಿಯ ಅಭಿನವ ನಾಗಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆಯನ್ನು ಶಿರಸಂಗಿ ವಿಶ್ವಕರ್ಮ ವಿಕಾಸ ಸಂಸ್ಥೆಯ ಉಪಾಧ್ಯಕ್ಷ ಭಗವಂತ ಪತ್ತಾರ ವಹಿಸಿದ್ದರು.

ವೇದಿಕೆಯಲ್ಲಿ ಈಶ್ವರ ಬಡಿಗೇರ, ಶ್ರೀಕಾಂತ ಪತ್ತಾರ, ವೀರುಪಾಕ್ಷಿ ಪತ್ತಾರ, ವಂದನಾ ಸೋನಾರ, ಪುರಸಭೆ ಅಧ್ಯಕ್ಷ ಹಣಮಂತ ಗುಡ್ಲಮನಿ, ಮುಖಂಡ ಸಂತೋಷ ಸೋನವಾಲ್ಕರ, ಮಹಾದೇವ ಪತ್ತಾರ, ಈರಪ್ಪ ಬಡಿಗೇರ, ಡಿ.ಕೆ.ಬಡಿಗೇರ, ಪ್ರಕಾಶ ಪತ್ತಾರ, ರಾಮಚಂದ್ರ ಪತ್ತಾರ, ವಾಸುದೇವ ಬಡಿಗೇರ, ನಾಗಲಿಂಗ ಪೋತದಾರ, ಮೌನೇಶ ಬಡಿಗೇರ, ಡಾ॥ ರಾಘವೇಂದ್ರ ಪತ್ತಾರ, ವಿರೇಂದ್ರ ಪತ್ತಾರ, ಮುರಳಿ ಬಡಿಗೇರ, ಮಲ್ಲಪ್ಪ ಬಡಿಗೇರ, ಶಿವರಾಜ ಪತ್ತಾರ, ಅನಂತ ಸತ್ತಿಗೇರಿ, ಚಿದಂಬರ ಪತ್ತಾರ ಉಪಸ್ಥಿತರಿದ್ದರು. ಗಜಾನನ ಪತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

2 ಕ್ವಿಂಟಲ್ ಸೇಬು ಹಣ್ಣಿನ ಹಾರ: ಸಮಾವೇಶಕ್ಕೆ ಆಗಮಿಸಿದ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರಿಗೆ ವಿಶ್ವಕರ್ಮ ಸಮಾಜ ಬಾಂಧವರು ಕಲ್ಮೇಶ್ವರ ವೃತ್ತದಲ್ಲಿ 2 ಕ್ವಿಂಟಲ್ ಸೇಬು ಹಣ್ಣಿನ ಹಾರವನ್ನು ಕ್ರೇನ್ ಸಹಾಯದಿಂದ ಹಾಕಿ ಅದ್ದೂರಿಯಾಗಿ ಬರಮಾಡಿಕೊಂಡರು. ಕುಂಭಮೇಳದೊಂದಿಗೆ ಭವ್ಯವಾದ ಮೆರವಣಿಗೆ ಪಟ್ಟಣದ ವಿವಿಧ ಬೀದಿಗಳಲ್ಲಿ ಸಂಚರಿಸಿ ಸಮಾವೇಶದ ಸ್ಥಳಕ್ಕೆ ಆಗಮಿಸಿತ್ತು.

# ಖಾಲಿ ಹೊಟ್ಟೆಯಲ್ಲಿ ಈ ಡ್ರೈಫ್ರೂಟ್ಸ್ ಸೇವಿಸಿದರೆ, ಬಿಳಿ ಕೂದಲು ಬೇರಿನಿಂದ ಕಪ್ಪಾಗುತ್ತದೆ!



ಬದಲಾಗುತ್ತಿರುವ ಋತುವಿನಲ್ಲಿ ಆರೋಗ್ಯದ ಜೊತೆಗೆ ಕೂದಲಿನ ಆರೈಕೆಯೂ ಬಹಳ ಮುಖ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಜನರ ಕೂದಲು ಅವರ ವಯಸ್ಸಿಗೆ ಮುಂಚೆಯೇ ಬಿಳಿಯಾಗಲು ಪ್ರಾರಂಭಿಸುತ್ತದೆ. ಹೀಗಾಗಿ, ಕೂದಲಿನ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು.ಇಂತಹ ಪರಿಸ್ಥಿತಿಯಲ್ಲಿ ಕೂದಲು ಉದ್ದವಾಗಲು ಡ್ರೈ ಫ್ರೂಟ್ಸ್ ಮತ್ತು ನಟ್ಸ್ ಅನ್ನು ಆಹಾರದಲ್ಲಿ ಸೇವಿಸಬೇಕು.

ಅವುಗಳು ಯಾವವು? ಉತ್ತಮ ಕೂದಲು ಬೆಳವಣಿಗೆಗೆ ಬಾದಾಮಿ ಸೇವನೆಯು ತುಂಬಾ ಪ್ರಯೋಜನಕಾರಿಯಾಗಿದೆ, ಆದ್ದರಿಂದ ನೆನೆಸಿದ ಬಾದಾಮಿಯನ್ನು ಪ್ರತಿದಿನ ತಿನ್ನಬೇಕು.

ವಾಲ್‌ನಟ್ಸ್ ಕೂದಲಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಆದ್ದರಿಂದ ನಿಮ್ಮ ಕೂದಲು ನಿರ್ಜೀವ ಮತ್ತು ದುರ್ಬಲವಾಗಿದ್ದರೆ, ನೀವು ಪ್ರತಿದಿನ ವಾಲ್‌ನಟ್ಸ್ ಸೇವಿಸಬೇಕು.

ಹಲಸಿನ ಬೀಜಗಳನ್ನು ಸೇವಿಸುವುದು ಕೂದಲಿಗೆ ತುಂಬಾ ಒಳ್ಳೆಯದು. ಇದಕ್ಕೆ ನೀವು ಹಲಸಿನ ಬೀಜಗಳನ್ನು ಪುಡಿಮಾಡಿ ನೀರಿನಲ್ಲಿ ಬೆರೆಸಿ ಅಥವಾ ಸಲಾಡ್‌ನಲ್ಲಿ ಹಲಸಿನ ಬೀಜಗಳನ್ನು ಬೆರೆಸಿ ಸೇವಿಸಬಹುದು. ಗೋಡಂಬಿ ಸೇವಿಸುವುದರಿಂದ ಕೂದಲು ದಟ್ಟವಾಗಿ ಕಪ್ಪಾಗುತ್ತದೆ. ಅದಕ್ಕೆ, ಪ್ರತಿದಿನ 5 ಗೋಡಂಬಿಗಳನ್ನು ಸೇವಿಸಿ. ಪಿಸ್ತಾ ತಿನ್ನುವುದು ನಿಮ್ಮ ಇಡೀ ದೇಹಕ್ಕೆ ಪ್ರಯೋಜನಕಾರಿ, ಆದರೆ ನೀವು ಪ್ರತಿದಿನ 5 ಪಿಸ್ತಾ ಸೇವಿಸಿದರೆ, ನಿಮಗೆ ಕೂದಲಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗುಡ್ ಬೈ ಹೇಳಬಹುದು.

# ತಾಂಬೂಲ ತಿಂದ ಬಳಿಕ ಒಂದು ಗಂಟೆ ಯಾವೆಲ್ಲಾ ಆಹಾರ ಸೇವಿಸಬಾರದು?



ತಾಂಬೂಲದಲ್ಲಿ ಬಳಸುವ ವೀಳ್ಯದೆಲೆಯು ಅನೇಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಎಲೆಯಲ್ಲಿ ಸುಣ್ಣದ ಜೊತೆಗೆ ಜಾಯಿಕಾಯಿ, ಹಸಿರು ಕಪೂರ, ಕುಂಕುಮ ಹೂವು, ಏಲಕ್ಕಿ ಪುಡಿ, ಕಸ್ತೂರಿ ಇತ್ಯಾದಿಗಳನ್ನು ಬಳಸುತ್ತಾರೆ.

ಇವೆಲ್ಲವೂ ಆಯುರ್ವೇದದ ಪ್ರಕಾರ ಆರೋಗ್ಯಕ್ಕೆ ಪ್ರಯೋಜನಕಾರಿ. ಭಾರತೀಯರು ಊಟದ ನಂತರ ತಾಂಬೂಲವನ್ನು ಅಗಿಯುತ್ತಾರೆ. ಜೀರ್ಣಕ್ರಿಯೆಯನ್ನು ಸರಾಗಗೊಳಿಸುವ ಸಲುವಾಗಿ ಪೂರ್ಣಾಹಾರದ ನಂತರ ತಾಂಬೂಲವನ್ನು ಸೇವಿಸಲಾಗುತ್ತದೆ.

ಹೊಟ್ಟೆ ಮತ್ತು ಕರುಳಿನಲ್ಲಿ ಪಿಹೆಚ್ ಅಸಮತೋಲನವನ್ನು ಪರಿಣಾಮಕಾರಿಯಾಗಿ ತಡೆ–ಯುತ್ತದೆ. ಜೀರ್ಣಾಂಗ ವ್ಯವಸ್ಥೆಯ ಆರೋಗ್ಯವನ್ನು ಸುಧಾರಿಸುತ್ತದೆ. ಆದರೆ ತಾಂಬೂಲ ಸೇವಿಸಿ ತಿನ್ನಬಾರದ ಕೆಲವು ಆಹಾರ ಪದಾರ್ಥಗಳ ಬಗ್ಗೆ ಅನೇಕರಿಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ತಾಂಬೂಲವನ್ನು ಸೇವಿಸಿದ ನಂತರ ಕೆಲವು ಆಹಾರಗಳನ್ನು ಸೇವಿಸಬಾರದು.

ವೀಳ್ಯದೆಲೆಯನ್ನು ಮಿತವಾಗಿ ಸೇವಿಸಿದರೆ ಔಷಧ, ಅತಿಯಾಗಿ ಸೇವಿಸಿದರೆ ವಿಷ ಎಂದು ತಜ್ಞರು ಎಚ್ಚರಿಸುತ್ತಾರೆ. ವೀಳ್ಯದೆಲೆಯ ಮೇಲೆ ಸುಣ್ಣ ಬಲಸುವುದರಿಂದ ಕೆಲವು ಆರೋಗ್ಯ ಸಮಸ್ಯೆಗಳೂ ಉಂಟಾಗಬಹುದು.

# ಮಾ.5ಕ್ಕೆ ಶಿವಾಜಿ ಮಹಾರಾಜರ ಮೂರ್ತಿ ಅನಾವರಣ



ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಅವರ ಕನಸಿನ ಯೋಜನೆ ಸಾಕಾರಗೊಳ್ಳಲು ದಿನಗಣನೆ ಆರಂಭವಾಗಿದೆ. ಬೆಳಗಾವಿ ಹೊರವಲಯದ ರಾಜಹಂಸಗಡದಲ್ಲಿ ನಿರ್ಮಾಣವಾಗಿರುವ, ರಾಷ್ಟ್ರದಲ್ಲೇ ಬೃಹತ್ ಆಗಿರುವ ಛತ್ರಪತಿ ಶಿವಾಜಿ ಮಹಾರಾಜ ಭವ್ಯ ಮೂರ್ತಿ ಅನಾವರಣಕ್ಕೆ ಮುಹೂರ್ತ ನಿಗದಿಯಾಗಿದೆ. ತನ್ನಿಮಿತ್ತ ಮಾರ್ಚ್ 4 ಮತ್ತು 5ರಂದು 2 ದಿನಗಳ ಕಾಲ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ರಾಜಹಂಸಗಡ ಕೋಟೆ ಆವರಣದಲ್ಲಿ ಹಬ್ಬದ ಸಂಭ್ರಮ ನಿರ್ಮಾಣವಾಗಲಿದೆ.

ಮಾರ್ಚ್ 5ರಂದು ಬೆಳಗ್ಗೆ 10 ಗಂಟೆಗೆ 50 ಅಡಿ ಎತ್ತರದ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿ ಅನಾವರಣಗೊಳ್ಳಲಿದೆ. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ನಾಯಕರೂ, ಮಾಜಿ ಮುಖ್ಯಮಂತ್ರಿಗಳೂ ಆಗಿರುವ ಸಿದ್ದರಾಮಯ್ಯ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ, ಶಿವಾಜಿ ಮಹಾರಾಜರ 13ನೇ ವಂಶಸ್ಥರಾದ ಯುವರಾಜ ಸಂಭಾಜಿರಾಜೇ ಛತ್ರಪತಿ, ಮಹಾರಾಷ್ಟ್ರದ ಮಾಜಿ ಗೃಹ ಸಚಿವ, ಹಾಲಿ ವಿಧಾನಪರಿಷತ್ ಸದಸ್ಯ ಸತೇಜ್ (ಬಂಟಿ) ಪಾಟೀಲ, ಖ್ಯಾತ ಮರಾಠಿ ನಟ ಹಾಗೂ ಲೋಕಸಭಾ ಸದಸ್ಯ ಡಾ. ಅಮೋಲ್ ಕೋಲ್ಹೆ, ಲಾತೂರು ಗ್ರಾಮೀಣ ಶಾಸಕ ಧೀರಜ್ ದೇಶಮುಖ್, ಖ್ಯಾತ ಚಿತ್ರನಟ ರಿತೇಶ ದೇಶಮುಖ್ ಸೇರಿದಂತೆ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

60 ಅಡಿ ಎತ್ತರದ ಎಲೆಕ್ಟ್ರಿಕ್ ಧ್ವಜಸ್ಥಂಭ ಕೂಡ ಇದೇ ಸಂದರ್ಭದಲ್ಲಿ ಉದ್ಘಾಟನೆಗೊಳ್ಳಲಿದೆ. ರಾಜಹಂಸಗಡ ಕೋಟೆಯನ್ನು ಅಭೂತಪೂರ್ವವಾಗಿ ಶೃಂಗರಿಸಲಾಗಿದ್ದು,ಹೊಸದಾಗಿ ಮಹಾದ್ವಾರ, ಕಿಲ್ಲಾದ್ವಾರಗಳ ನಿರ್ಮಾಣ ಮಾಡಲಾಗಿದೆ. ಕೋಟೆ ಆವರಣದಲ್ಲಿರುವ ಸಿದ್ದೇಶ್ವರ ಮಂದಿರವನ್ನು ಆಕರ್ಷಕವಾಗಿ ಜೀರ್ಣೋದ್ಧಾರ ಮಾಡಲಾಗಿದೆ.

ಮಾರ್ಚ್ 4ರಂದೇ ವಿವಿಧ ಧಾರ್ಮಿಕ, ಪಾರಂಪರಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, 2 ದಿನಗಳ ಕಾಲ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯಲಿದೆ. ಬೆಳಗಾವಿ ಇತಿಹಾಸದಲ್ಲೇ ವೈಶಿಷ್ಟ್ಯಪೂರ್ಣವಾದ ಲೇಸರ್ ಶೋ, ಕ್ರ್ಯಾಕರ್ ಶೋ ಸಹ ನಡೆಯಲಿದೆ. ಪಾಲಕಿ ಉತ್ಸವ, ಪೋವಾಡಾ (ಕೀರ್ತನೆ), ಡೋಲ್ ತಾಶಾ ನೃತ್ಯ, ಮರದಾನಿ ಖೇಳ ಮೊದಲಾದ ಪಾರಂಪರಿಕ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ.

ಐತಿಹಾಸಿಕ ರಾಜಹಂಸಗಡ ಕೋಟೆಯನ್ನು ಸುಂದರ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಬೇಕು, ಅಲ್ಲಿ ಬೃಹತ್ ಶಿವಾಜಿ ಮಹಾರಾಜರ ಪುತ್ಥಳಿ ಪ್ರತಿಷ್ಠಾಪಿಸಬೇಕೆನ್ನುವುದು ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಅವರ ಬಹುಕಾಲದ ಕನಸಾಗಿತ್ತು. ಅದು ಈಗ ಅದ್ದೂರಿ ಕಾರ್ಯಕ್ರಮದ ಮೂಲಕ ನನಸಾಗುತ್ತಿದೆ.

# ಘಣನೀಯ ಪ್ರಮಾಣದಲ್ಲಿ ಸೋರಿಕೆ: ಬೆಳಗಾವಿ ನಗರಕ್ಕೆ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯ



ಬೆಳಗಾವಿ ಹಿಡಕಲ್ ಕಚ್ಚಾ ನೀರು ಸರಬರಾಜಿನ MS & ಹಳೇ PSC ಸಿಮೆಂಟ್ ಕೊಳವೆ ಮುಖ್ಯಲೈನ್‌ನ ವಿವಿಧ ಸ್ಥಳಗಳಲ್ಲಿ ಘಣನೀಯ ಪ್ರಮಾಣದಲ್ಲಿ ಸೋರಿಕೆ ಉಂಟಾಗಿದ್ದು, ಬೆಳಗಾವಿ ನಗರಕ್ಕೆ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯ ಉಂಟಾಗಲಿದೆ

ಹಿಡಕಲ್ ಕಚ್ಚಾ ನೀರು ಸರಬರಾಜಿನ ಒಖ & ಹಳೇ ಕಖಅ ಸಿಮೆಂಟ್ ಕೊಳವೆ ಮುಖ್ಯ ಲೈನ್‌ನ ವಿವಿಧ ಸ್ಥಳಗಳಲ್ಲಿ ಘಣನೀಯ ಪ್ರಮಾಣದಲ್ಲಿ ಸೋರಿಕೆ ಉಂಟಾಗಿದ್ದು,ಅವುಗಳು ಕುಂದರಗಿ ಪಂಪ್ ಹೌಸ ಹತ್ತಿರ–1, ಫಾರೆಸ್ಟ್ ಚೆಕ್ಪೋಸ್ಟ್ ಹತ್ತಿರ–2 ಒಟ್ಟು ಮೂರು ಸ್ಥಳಗಳಲ್ಲಿ ದಿನಾಂಕ 16.02.2023 ರಂದು ತುರ್ತಾಗಿ ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು ಹಾಗೂ ಸಿಮೆಂಟ್ ಪ್ಯಾಕಿಂಗ್ ಗಟ್ಟಿಯಾಗಲು 6–8 ಘಂಟೆಗಳ ಕಾಲ ಬೇಕಾಗಿರುವುದರಿಂದ ಸದರಿ ದಿನಾಂಕದಂದು ಪಂಪ್‌ಗಳನ್ನು ಸ್ಥಗಿತಗೊಳಿಸಲಾಗುವುದು. ಹಾಗೂ ಸದರಿ ದುರಸ್ಥಿ ಕಾರ್ಯದಿಂದ ದಿನಾಂಕ : 17 & 18 ಫೆಬ್ರವರಿ 2023 ಎರಡು ದಿವಸಗಳು, 2*7 ಪ್ರಾತ್ಯಕ್ಷಿಕ ವಲಯ ಸೇರಿ ಬೆಳಗಾವಿ ನಗರದ ಕೆಲವು ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯ ಉಂಟಾಗುವುದು.

ಸರಬರಾಜು ವ್ಯತ್ಯಯ ಉಂಟಾಗುವ ದಕ್ಷಿಣ –ಪ್ರದೇಶಗಳು : 1. ಮಜಗಾಂವ್, 2, ನಾನವಾಡಿ, 3. ಚಿದಂಬರ್ ನಗರ, 4, ಶಹಾಪುರ, 5. ವಡಗಾಂವ್, 6. ಹಳೇ ಬೆಳಗಾವಿ.

ಸರಬರಾಜು ವ್ಯತ್ಯಯ ಉಂಟಾಗುವ ಉತ್ತರ ಪ್ರದೇಶಗಳು : 1. ಸಹ್ಯಾದ್ರಿ ನಗರ, 2. ಕುವೆಂಪು ನಗರ, 3. ಟಿವಿ ಕೇಂದ್ರ, 4. ಸದಾಶಿವ ನಗರ, 5, ಬಸವ ಕಾಲೋನಿ, 6. ಕಲೇಶ್ವರ ನಗರ, 7. ಸುಭಾಸ್ ನಗರ, 8, ಅಶೋಕ್ ನಗರ, 9. ಎಂಎಂ ಬಡಾವಣೆ ಏರಿಯಾ, 10. ಹೊಸ ಗಾಂಧಿ ನಗರ, 11. ಕಣಬರ್ಗಿ, 12, ಕುಡಚಿ ಹಾಗೂ

1. ಕಂಟೋನೆಂಟ್ ಪ್ರದೇಶ, 2. ಹಿಂಡಾಲ್ಕೊ ಕಾರ್ಖಾನೆ, 3. ಕೆಎಐಡಿಬಿ ಕೈಗಾರಿಕಾ ಪ್ರದೇಶ, 4. ಎನ್–ರೂಟ್ ವಿಲೇಜ್ ಟ್ಯಾಪಿಂಗ್ಸ್, 5. ಡಿಫೈಯನ್ಸ್ ಏರಿಯಾ, 6. ಸೈನಿಕ್ ನಗರ, 7. ಕೆಎಲ್‌ಇ ಆಸ್ಪತ್ರೆ, 8, ಬಿಮ್ಸ್ ಆಸ್ಪತ್ರೆ,

ಇಂತಹ ಅನಿವಾರ್ಯ ಸಮಯದಲ್ಲಿ ಮೇ. ಎಲ್ & ಟಿ ಯೊಂದಿಗೆ ಸಹಕರಿಸಲು ಕೋರಿ, ಸ್ಥಳೀಯ ಬೆಳಗಾವಿ ವರದಿ ದಿನಪತ್ರಿಕೆಯಲ್ಲಿ ಪ್ರಕಟಿಸಲು ಮಹಾನಗರ ಪಾಲಿಕೆ ಮತ್ತು ಕೆ.ಯು.ಐ.ಡಿ.ಎಫ್.ಸಿ ಪರವಾಗಿ ಈ ಮೂಲಕ ವಿನಂತಿಸಿದ್ದಾರೆ.

# ಚಳಿಗಾಲದಲ್ಲಿ ಆರೋಗ್ಯ ವೃದ್ಧಿಗಾಗಿ ಈ ಸೊಪ್ಪುಗಳು ವರದಾನವಿದ್ದಂತೆ



ಇತರ ಋತುಗಳಿಗಿಂತ ಚಳಿಗಾಲದಲ್ಲಿ ರೋಗನಿರೋಧಕ ಶಕ್ತಿ ದುರ್ಬಲಗೊಳ್ಳುತ್ತದೆ. ಹಾಗಾಗಿಯೇ, ಶೀತ, ನೆಗಡಿ, ಜ್ವರದಂತಹ ಸಾಂಕ್ರಾಮಿಕ ರೋಗಗಳು ಬಹಳ ಸುಲಭವಾಗಿ ಹರಡುತ್ತವೆ. ಇದನ್ನು ತಪ್ಪಿಸಲು ಬಯಸುವವರಿಗೆ ಸೊಪ್ಪುಗಳು ವರದಾನವಿದ್ದಂತೆ ಎನ್ನುತ್ತಾರೆ ಆಯುರ್ವೇದ ತಜ್ಞರು.

ವಾಸ್ತವವಾಗಿ, ನಮ್ಮಲ್ಲಿ ಕೆಲವರು ಚಳಿಗಾಲದಲ್ಲಿ ಶೀತವಾಗಬಾರದು ಎಂದು ಸೊಪ್ಪುಗಳ ಸೇವನೆಯನ್ನು ತಪ್ಪಿಸುತ್ತಾರೆ. ಆದರೆ, ಆಯುರ್ವೇದ ತಜ್ಞರ ಪ್ರಕಾರ, ಚಳಿಗಾಲದಲ್ಲಿ ಸೊಪ್ಪುಗಳ ಸೇವನೆಯಿಂದ ರೋಗನಿರೋಧಕ ಶಕ್ತಿ ಬಲಗೊಳ್ಳುವುದರ ಜೊತೆಗೆ ನಾವು ಹಲವು ಸಾಮಾನ್ಯ ಕಾಯಿಲೆಗಳಿಂದಲೂ ದೂರ ಉಳಿಯಬಹುದು ಎಂದು ಹೇಳಲಾಗುತ್ತದೆ.

ಹಾಗಿದ್ದರೆ, ಚಳಿಗಾಲದಲ್ಲಿ ಉತ್ತಮ ಆರೋಗ್ಯಕ್ಕಾಗಿ ಯಾವ ಸೊಪ್ಪುಗಳನ್ನು ಸೇವಿಸಬೇಕು ಎಂದು ತಿಳಿಯೋಣ. ಆರೋಗ್ಯಕರ ಜೀವನಕ್ಕಾಗಿ ಚಳಿಗಾಲದಲ್ಲಿ ಈ ಸೊಪ್ಪುಗಳನ್ನು ತಿನ್ನಲೇಬೇಕು:

ಪುದೀನ ಸೊಪ್ಪು: ಪ್ರೋಟೀನ್, ಮೆಗ್ನೀಸಿಯಮ್ ಮತ್ತು ವಿಟಮಿನ್ ಸಿ ನಂತಹ ಪೋಷಕಾಂಶಗಳ ಆಗರ ಪುದೀನಾ ಸೊಪ್ಪನ್ನು ಚಳಿಗಾಲದಲ್ಲಿ ಹೆಚ್ಚು ಬಳಸುವುದರಿಂದ ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ.

ಕರಿಬೇವಿನ ಸೊಪ್ಪು: ಚಳಿಗಾಲದಲ್ಲಿ ಮಾತ್ರವಲ್ಲ ಎಲ್ಲಾ ಋತುಗಳಲ್ಲೂ ಕರಿಬೇವಿನ ಸೊಪ್ಪು ಆರೋಗ್ಯಕ್ಕೆ ಪ್ರಯೋಜನಕಾರಿ. ಕರಿಬೇವಿನ ಸೊಪ್ಪಿನಲ್ಲಿರುವ ಆಯಂಟಿ ಆಕ್ಸಿಡೆಂಟ್‌ಗಳು ಮತ್ತು ಬ್ಯಾಕ್ಟೀ–ರಿಯಾ ವಿರೋಧಿ ಗುಣಗಳು ರೋಗಗಳನ್ನು ಗುಣಪಡಿಸುವಲ್ಲಿ ಬಹಳ ಪರಿಣಾಮಕಾರಿ. ಮಾತ್ರವಲ್ಲ, ಇದು ಕೂದಲ ಬೆಳವಣಿಗೆ ಮತ್ತು ಕಣ್ಣುಗಳ ಆರೋಗ್ಯಕ್ಕೂ ಪ್ರಯೋಜನಕಾರಿ ಆಗಿದೆ.

ನುಗ್ಗೆ ಸೊಪ್ಪು: ನುಗ್ಗೆ ಸೊಪ್ಪಿನಲ್ಲಿ ಕಬ್ಬಿಣದ ಅಂಶದ ಜೊತೆಗೆ ಪೋಷಕಾಂಶಗಳು ಹೇರಳವಾಗಿವೆ. ಇದಲ್ಲದೆ, ನುಗ್ಗೆ ಸೊಪ್ಪಿನಲ್ಲಿ ಕ್ಯಾಲ್ಸಿಯಂ, ವಿಟಮಿನ್ ಎ, ವಿಟಮಿನ್ ಡಿ ಅಂಶ ಹೇರಳವಾಗಿರುತ್ತದೆ. ಇದು ನಿಮ್ಮನ್ನು ಹಲವು ಕಾಯಿಲೆಗಳಿಂದ ದೂರ ಉಳಿಯಲು ಸಹಾಯಕವಾಗಿದೆ.

ದೊಡ್ಡಪತ್ರೆ: ಪೋಷಕಾಂಶಗಳಲ್ಲಿ ಸಮೃದ್ಧವಾಗಿರುವ ದೊಡ್ಡಪತ್ರೆ ಎಲೆಗಳನ್ನು ನಿಮ್ಮ ಆಹಾರದ ಭಾಗವಾಗಿಸುವುದರಿಂದ ಅದರಲ್ಲಿರುವ ಆಯಂಟಿ ಬ್ಯಾಕ್ಟೀರಿಯಲ್ ಮತ್ತು ಆಯಂಟಿ ವೈರಸ್ ಗುಣಲಕ್ಷಣಗಳು ಹಲವು ಕಾಯಿಲೆಗಳಿಂದ ನಿಮ್ಮನ್ನು ದೂರವಿಡುತ್ತದೆ.

ತುಳಸಿ ಎಲೆ: ಭಾರತೀಯ ಸಂಸ್ಕೃತಿಯಲ್ಲಿ ಪೂಜನೀಯ ಸ್ಥಾನಮಾನವನ್ನು ಹೊಂದಿರುವ ತುಳಸಿ ಎಲೆಗಳು ಆರೋಗ್ಯದ ದೃಷ್ಟಿಯಿಂದಲೂ ತುಂಬಾ ಪ್ರಯೋಜನಕಾರಿ ಆಗಿದೆ. ತುಳಸಿ ಎಲೆಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ಗುಣಪಡಿಸಬಲ್ಲ ಹಲವು ಔಷಧೀಯ ಗುಣಗಳು ಇದರಲ್ಲಿ ಅಡಕವಾಗಿವೆ. ಹಾಗಾಗಿ, ತುಳಸಿ ಎಲೆಗಳ ಸೇವನೆ ನಿಮ್ಮನ್ನು ಶೀತ, ಜ್ವರದಂತಹ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಂದ ರಕ್ಷಿಸುತ್ತದೆ.

ಸೂಚನೆ: ಈ ಲೇಖನದಲ್ಲಿ ನೀಡಲಾದ ಮಾಹಿತಿಯು ಮನೆಮದ್ದುಗಳು ಮತ್ತು ಸಾಮಾನ್ಯ ಮಾಹಿತಿಯನ್ನು ಆಧರಿಸಿದೆ. ಇದನ್ನು ಅಳವಡಿಸಿಕೊಳ್ಳುವ ಮೊದಲು ವೈದ್ಯಕೀಯ ಸಲಹೆ ಪಡೆಯಿರಿ.

# ಜೈನ್ ವಿವಿ ವಿರುದ್ಧ ಕ್ರಮ ಕೈಗೊಳ್ಳುವಂತೆ ದಲಿತ ವಿದ್ಯಾರ್ಥಿ ಪರಿಷತ ಆಗ್ರಹ

ಧಾರವಾಡ : ಜಾತಿನಿಂದನೆ ಮತ್ತು ದೇಶದ್ರೋಹ ಎಸಗಿದವರ ವಿರುದ್ಧ ಕಠಿಣ ಕ್ರಮ ಹಾಗೂ ಜಾತಿವಾದಿ ಜೈನ್ ವಿವಿ ವಿರುದ್ಧ ಕ್ರಮ ಕೈಗೊಳ್ಳುವಂತೆ ದಲಿತ ವಿದ್ಯಾರ್ಥಿ ಪರಿಷತ್ ಧಾರವಾಡ ಜಿಲ್ಲಾ ಘಟಕ ತಾಲ್ಲೂಕ ಘಟಕದ ನೇತೃತ್ವದಲ್ಲಿ ಮಂಗಳವಾರ ತಹಸೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ಧಾರವಾಡ ಜಿಲ್ಲಾ ಸಂಚಾಲಕ ಹನುಮಂತ ದಾಸರ ಮಾಧ್ಯಮದ ಜೊತೆ ಮಾತನಾಡಿ ಇತ್ತೀಚೆಗೆ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಗುಂಪೊಂದು ಸ್ಕಿಟ್‌ವೊಂದರಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ದಲಿತ ಸಮುದಾಯದ ಬಗ್ಗೆ ಅಪಹಾಸ್ಯ ಮತ್ತು ಜಾತಿದ್ವೇಷದ ಅವಮಾನ ಮಾಡಲಾಗಿದ್ದು, ಇದು ಸ್ಪಷ್ಟವಾಗಿ, ಉದ್ದೇಶಪೂರ್ವಕವಾಗಿ ದೇಶದ್ರೋಹ ಮತ್ತು ಜಾತಿ ನಿಂದನೆಯ ಪ್ರಕರಣ ಹಾಗೂ ಇದು ಖಂಡನೀಯವಾಗಿದೆ.ಜೈನ್ ವಿಶ್ವವಿದ್ಯಾಲಯದ "ಮ್ಯಾನೇಜ್‌ಮೆಂಟ್ ಸ್ಟಡೀಸ್" ಕೇಂದ್ರದ ಕಾಲೇಜು ತಂಡ ಜಾತಿವಾದವನ್ನು ಎತ್ತಿ ತೋರಿಸುವ ಮತ್ತು ಜಾತಿನಿಂದನೆಯ ಕೀಳು ಭಾಷೆಯನ್ನು ಬಳಸಿ ಸ್ಕಿಟ್ ಮಾಡಿ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಮತ್ತು ದಲಿತ ಸಮುದಾಯವನ್ನು ನೇರವಾಗಿ ಗೇಲಿ ಮಾಡಿ ಜಾತಿನಿಂದನೆ ಮಾಡಿರುವದು ಖಂಡನೀಯ ಎಂದು ಆಕ್ರೋಶಗೊಂಡರು

ಜೈನ್ ವಿಶ್ವವಿದ್ಯಾಲಯದ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕೇಂದ್ರದ ಥಿಯೇಟರ್ ಗ್ರೂಪ್, 'ದಿ ಡೆಲ್ರಾಯ್ಸ್ ಬಾಯ್ಸ್', 'ಮ್ಯಾಡ್-ಆಡ್ಸ್' ನ ಭಾಗವಾಗಿ, ಫೆಸ್ಟ್‌ನಲ್ಲಿ ಅಂಬೇಡ್ಕರ್ ಮತ್ತು ದಲಿತ ಸಮುದಾಯದ ಕುರಿತು ಹಾಸ್ಯ ಮತ್ತು ಗೇಲಿ ಮಾಡುತ್ತ ಸ್ಕಿಟ್‌ನ್ನು ಪ್ರದರ್ಶಿಸಿದ್ದಾರೆ. ಇದು ಇಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಸ್ಕಿಟ್ ನಲ್ಲಿ ಕೆಳ ಜಾತಿಯ ಹಿನ್ನೆಲೆಯ ವ್ಯಕ್ತಿಯೊಬ್ಬ ಮೇಲ್ಜಾತಿ ಮಹಿಳೆಯೊಂದಿಗೆ ಡೇಟಿಂಗ್ ಮಾಡಲು ಪ್ರಯತ್ನಿಸುತ್ತಿರುವುದನ್ನು ಪ್ರದರ್ಶಿಸಿದ್ದು, ಈ ವೇಳೆ ಆತ ತಾನು ದಲಿತ, ಕೆಳಜಾತಿಯವ ಅಥವಾ ಅಸ್ಪೃಶ್ಯ



ಎಂದು ಹೇಳಿಕೊಂಡಾಗ 'ಡೋಂಟ್ ಟಚ್ ಮಿ, ಟಚ್ ಮಿ' ಎಂಬ ಹಾಡನ್ನು ಗೇಲಿ ಮಾಡುತ್ತಾ ಪ್ಲೇ ಮಾಡಿ ಉದ್ದೇಶಪೂರ್ವಕವಾಗಿ ಅವಮಾನಿಸಿರುತ್ತಾರೆ. ಇದಲ್ಲದೆ, ಬಿ.ಆರ್. ಅಂಬೇಡ್ಕರ್ ಅವರನ್ನು 'ಬೀಯರ್ ಅಂಬೇಡ್ಕರ್' ಎಂದು ಹೇಳಿ ಅತ್ಯಂತ ಕೀಳು ಮಟ್ಟದಲ್ಲಿ ಅವಮಾನಿಸಿರುತ್ತಾರೆ.

ಇದರೊಂದಿಗೆ ಕೆಲವು ಜಾತಿ ನಿಂದನಾತ್ಮಕ ನುಡಿಗಟ್ಟುಗಳನ್ನು ಬಳಸಿರುವದು ನಾಚಿಕೆಗೇಡಿನ ಸಂಗತಿಯಾಗಿದೆ

ಈ ದೇಶದ ಅತ್ಯುನ್ನತ ಪುರಸ್ಕಾರವಾದ 'ಭಾರತರತ್ನ' ಪಡೆದ ಹಾಗೂ ಈ ದೇಶಕ್ಕೆ ಸಂವಿಧಾನವನ್ನು ಕೊಟ್ಟ ಸಂವಿಧಾನಶಿಲ್ಪಿ ಮತ್ತು ಈ ದೇಶದ ಸಾಕ್ಷಿಪ್ರಜ್ಞೆ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅತ್ಯಂತ ತುಚ್ಚವಾಗಿ ಅವಮಾನಿಸಿರುವುದು ದೇಶದ್ರೋಹವೆಂದೇ ಪರಿಗಣಿಸಬೇಕು. ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕಿದ ಮೇಲೂ ಮತ್ತು ನಮ್ಮ ಕಾನೂನಿನಲ್ಲಿ ಅಸ್ಪೃಶ್ಯತೆ ಆಚರಿಸುವುದು ದಂಡಾರ್ಹ ಅಪರಾಧ ಎಂದು ತಿಳಿದಿದ್ದರೂ ಜೈನ್ ಕಾಲೇಜಿನ ಸದರಿ ವಿದ್ಯಾರ್ಥಿಗಳು ಜಾತಿನಿಂದನೆ ಮಾಡಿರುವುದು ಇಡೀ ಶೋಷಿತ ಸಮುದಾಯಗಳಿಗೆ ಅಪಾರ ನೋವು ಮತ್ತು ಅಪಮಾನ ಮಾಡಿರುವ ಅಪರಾದವಾಗಿದೆ ಆದ್ದರಿಂದ ಇದಕ್ಕೆ ಸಂಭಂದಿಸಿದವರ ವಿರುದ್ಧ ತಕ್ಷಣವೇ ನಿಮ್ಮ ನೇತೃತ್ವದ ಘನ ಸರ್ಕಾರವು ದೂರು ದಾಖಲಿಸಿ ಕಾನೂನು ಕ್ರಮ ಕೈಗೊಂಡು ಇವರನ್ನು ಬಂಧಿಸಬೇಕು ಹಾಗೇಯೇ ಇಷ್ಟೆಲ್ಲಾ ಎಡವಟ್ಟು ಆಗಲು ಜೈನ್ ವಿಶ್ವವಿದ್ಯಾಲಯದ ಮೇಲಾಧಿಕಾರಿಗಳ ಪರೋಕ್ಷ ಬೆಂಬಲ ಇದೆ ಎಂಬದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸುವ ಮೂಲಕ ದೇಶ ವಿರೊಧಿ ಚಟುವಟಿಕೆ ನಡೆಸುತ್ತಿರುವ, ವಿದ್ಯಾರ್ಥಿ ಯುವಜನರ ಮೂಲಕ ದೇಶದಲ್ಲಿ ಅಶಾಂತಿ ಸೃಷ್ಟಿಲು ಯತ್ನಿಸುತ್ತಿರುವ ಈ ಜೈನ್ ವಿವಿ ವಿರುದ್ಧ ಕ್ರಮ ಕೈಗೊಳ್ಳಬೇಕು.

ಇಲ್ಲವಾದರೆ ಈ ಜೈನ್ ವಿವಿ ಯಿಂದ ರಾಜ್ಯದಲ್ಲಿ ಸಾಮಾಜಿಕ ಅಸಮಾನತೆ ಬಿತ್ತುವ ಕಾರ್ಯಗಳಿಗೆ ಪರೋಕ್ಷವಾಗಿ ಸಹಮತಿ ನೀಡಿದಂತಾಗುತ್ತದೆ. ಇವರ ವಿರುದ್ಧವೂ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಮಂಜುನಾಥ ಹಾಸಟ್ಟಿ, ಮಹಿಳಾ ಘಟಕದ ಜಿಲ್ಲಾ ಸಂಚಾಲಕರಾದ ದುರ್ಗಾ. ಎಚ್., ಪ್ರಧಾನ ಕಾರ್ಯದರ್ಶಿ ಸರೋಜಾ ಕೊಟ್ಟೂರ, ತಾಲ್ಲೂಕು ಸಂಚಾಲಕಿಯಾದ ಶಾಂಭವಿ ಎಂ.,ಜಿಲ್ಲಾ ಮಾಧ್ಯಮ ವಕ್ತಾರ ಬಸವರಾಜ ಕರಿಗಾರ, ಸಹ ಸಂಚಾಲಕ ಶಶಿಕುಮಾರ ಬಾವಚಿ, ಸಾಮಾಜಿಕ ಜಾಲತಾಣ ಕಾರ್ಯದರ್ಶಿ ರಾಕೇಶ್ ಆಯಟ್ಟಿ, ಸಾಂಸ್ಕೃತಿಕ ಕಾರ್ಯದರ್ಶಿ ಶಿವರಾಜ ಮೋತಿ,ಧಾರವಾಡ ತಾಲೂಕು ಸಂಚಾಲಕ ಬಸವರಾಜ ವಾಲಿಕಾರ, ಹುಬ್ಬಳ್ಳಿ ತಾಲ್ಲೂಕು ಸಂಚಾಲಕ ರವಿ ಬೇವಿನಮಟ್ಟಿ, ಹನುಮನಗೌಡ, ಆಮೇಶ ಪರಪ್ಪಗೋಳ, ನಾಗರಾಜ ಮಾದರ, ರಾಹುಲ್ ದ್ರಾವಿಡ್ ಹಾಗೂ ಇನ್ನಿತರ ಪಧಾಧಿಕಾರಿಗಳು ಭಾ- ಗಿಯಾಗಿದ್ದರು.

## ವೀರ ಯೋಧರ ಸ್ಮರಣಾರ್ಥಕ್ಕಾಗಿ ರಕ್ತದಾನ ಶಿಬಿರ



ಬಳ್ಳಾರಿ: ರಕ್ತದಾನ ಮಹಾದಾನ ಅನ್ನ ಮತ್ತು ಅಕ್ಷರ ದಾನಕ್ಕಿತಂತ ರಕ್ತದಾನ ಮಿಗಿಲಾದದ್ದು ಎಲ್ಲಾ ಆರೋಗ್ಯವಂತ ಯುವಕರು ಮತ್ತು ವಯಸ್ಕರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಿ ಅಮೂಲ್ಯ ಜೀವಗಳ ರಕ್ಷಣೆಗೆ ಮುಂದಾಗಬೇಕೆಂದು ಮಾಜಿ ವಿಧಾನಪರಿಷತ್ ಸದಸ್ಯರಾದ ಕೆ.ಸಿ ಕೊಂಡಯ್ಯ ಕರೆ ನೀಡಿದರು. ಅವರು ಇಂದು ನಗರದ ಗಾಂಧಿನಗರದಲ್ಲಿನ ಶ್ರೀರಾಮರಾಜು ಫೌಂಡೇಶನ್ ಕಚೇರಿಯ ಆವರಣದಲ್ಲಿ ಕಳೆದು ಎರಡು ವರ್ಷಗಳ ಹಿಂದೆ ಫುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ದೇಶದ ವೀರಯೋಧರ ಸ್ಮರಣಾರ್ಥ ಶ್ರೀರಾಮರಾಜು ಫೌಂಡೇಶನ್ ಸಂಸ್ಥಾಪಕರು ಮತ್ತು ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಪ್ರಬಲ ಟಿಕೆಟ್ ಅಕಾಂಕ್ಷಿಯಾದ ಶ್ರೀ ರಾಮ ರಾಜು ರವರ ನೇತೃತ್ವದಲ್ಲಿ ಉಚಿತ ಸ್ವಯಂ ಪ್ರೇರಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಶ್ರೀರಾಮರಾಜು ಮಾತನಾಡಿ, ಕಳೆದ ಇಪ್ಪತ್ತು ವರ್ಷಗಳಿಂದ ನಮ್ಮ ಬಳಗ ವತಿಯಿಂದ ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಮತ್ತು ಅಂಗವಿಕಲರಿಗೆ, ಬಡವರ ಮದುವೆಗಳಿಗೆ ಸೇರಿದಂತೆ ಹಲವಾರು ಜನ ಬಡವರಿಗೆ ಸಹಾಯ ಮಾಡುತ್ತಾ ಬಂದಿರುತ್ತೇನೆ. ಅಷ್ಟೆ ಅಲ್ಲದೆ ಕೋರೋನಾ ಅವದಿಯಲ್ಲಿ ಬಡಜನತೆಗೆ ಕಿಟ್‌ಗಳನ್ನು ನೀಡಿ ಅವರ ಕಷ್ಟಕ್ಕೆ ಸ್ಪಂಧಿಸಿರುತ್ತೇನೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪಾಲಿಕೆ ಮಹಾಪೌರರಾದ ರಾಜೇಶ್ವರಿ ಸುಬ್ಬರಾಯುಡು, ಜಿಲ್ಲಾ ಪಂಚಾಯಿತಿ ಸದಸ್ಯರಾದ ಅಲ್ಲಂ ಪ್ರಶಾಂತ್, ಪಾಲಿಕೆ ಮಾಜಿ ಉಪ ಮಹಾಪೌರರಾದ ಬೆಣಕಲ್ಲು ಬಸವರಾಜ್‌ಗೌಡ, ಕೊಳಗಲ್ಲು ಅಂಜಿನಿ, ನಾಗರಾಜ್, ಪಿ ಜಗನ್ನಾಥ್,ಪರಶುರಾಮ್ ಲೋಕೇಶ್ ಬುಜ್ಜಿ ಅನೂಪ್ ರವಿತೇಜ, ಗಂಗಾಧರ ಸೇರಿದಂತೆ ಹಲವರಿದ್ದರು.

## ಶೀಘ್ರದಲ್ಲಿ ಬ ಬಾಗೇವಾಡಿ ಮತಕ್ಷೇತ್ರದ ಕಾರ್ಯಕರ್ತರು ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಸೇರ್ಪಡೆ



ಬ ಬಾಗೇವಾಡಿ: ನಮ್ಮ ಆತ್ಮೀಯ ಬಸವನ ಬಾಗೇವಾಡಿ ಮತಕ್ಷೇತ್ರ ಜನತೆ ಯಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಲ್ಲಿ ಬಸವನ ಬಾಗೇವಾಡಿ ಜನರು ಪಕ್ಷ ಸಂಘಟನೆ ಮತ್ತು ಪಕ್ಷ ಸೇರುವ ಆತುರದಲ್ಲಿದ್ದಾರೆ.

ಕಾರ್ಯಕರ್ತರು ಇದ್ದು ಕೆಲವೇ ದಿನದಲ್ಲಿಪಕ್ಷದ ಅಧ್ಯಕ್ಷರಾದ ಗಾಲಿ ಜನಾರ್ದನ ರೆಡ್ಡಿಯವರ ಅಧ್ಯಕ್ಷ ತೆಯಲ್ಲಿ ಬಸವನ ಬಾಗೇವಾಡಿ ಯಲ್ಲಿ ಬೃಹತ್ತಾದ ಕಾರ್ಯಕ್ರಮನ್ನು ಆಯೋಚನೆ ಮಾಡುವುದು ಮತ್ತು ಪಕ್ಷಕ್ಕೆ ಸೇರ್ಪಡೆಯಾಗಲಿರುವ ಕಾರ್ಯಕರ್ತರ ಸಮಾವೇಶವನ್ನು ಯಶಸ್ಸು ಮಾಡುವ ಕುರಿತು ಮತ್ತು ಮತಕ್ಷೇತ್ರದ ಹಿರಿಯರು ಯುವಕರು ಉತ್ಸಾಹದಿಂದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಶಕ್ತಿಯನ್ನು ತರುವುದು ಮತ್ತು ಎಲ್ಲಾ ನನ್ನ ಬ ಬಾಗೇವಾಡಿ ಮತಕ್ಷೇತ್ರದ ಬಂದುಗಳು ಕಾರ್ಯಕರ್ತ ಇಲ್ಲಿಯ ಸಂಘಟನೆಯ ಹೆಚ್ಚಿನ ರೀತಿಯಲ್ಲಿ ಯುವ ಉತ್ಸಾಹಿಗಳು ಮುಂದೆ ಬಂದು ನಮ್ಮ ಪಕ್ಷವನ್ನು ಬೆಂಬಲಿಸಿ ಮುಂಬರುವ ಚುನಾವಣೆಯಲ್ಲಿ ಈ ರಾಜ್ಯದಲ್ಲಿ ಪಕ್ಷ ಅಧಿಕಾರಿಕ್ಕೆ ತರುವುದು ನಮ್ಮೆಲ್ಲರ ಕರ್ತವ್ಯ ಮುಂದಿನ ದಿನಮಾನಗಳಲ್ಲಿ ಪಕ್ಷ ಈ ರಾಜ್ಯದಲ್ಲಿ ಅಧಿಕಾರಿಕ್ಕೆ ಬರುವುದು ನಿಶ್ಚಿತ ಎಂದು ಯುವ ಮುಖಂಡರು ಸಿದ್ದನಗೌಡ ರೆಡ್ಡಿ ಹೇಳಿದ್ದಾರೆ.

## ಅಭಿವೃದ್ಧಿಗೆ ನಾನು ಸದಾ ಸಿದ್ದ: ಶಾಸಕ ಪರಣ್ಣ ಮುನವಳ್ಳಿ



ಗಂಗಾವತಿ: ಗಂಗಾವತಿ ವಿಧಾನ ಸಭ ಕ್ಷೇತ್ರ ಇಂದರಗಿ ಗ್ರಾಮದ ಬಿಜೆಪಿ ಯುವ ಮುಖಂಡರು ಗಂಗಾವತಿ ಬಿಜೆಪಿ ಕಾರ್ಯಾಲಯದಲ್ಲಿ ಶಾಸಕರಿಗೆ ಮತ್ತೊಮ್ಮೆ ಶಾಸಕರು ಆಗಬೇಕೆಂದು ಶುಭ ಹಾರೈಸಿದರು.

ನಂತರ ಮಾತನಾಡಿದ ಶಾಸಕ ಪರಣ್ಣ ಮುನವಳ್ಳಿ ಅವರು ಗಂಗಾವತಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ, ಮುಂದಿನ ದಿನಗಳಲ್ಲಿ ಇನ್ನೂ ಸಾಕಷ್ಟು ಅಭಿವೃದ್ಧಿಯನ್ನು ಇಂದರಗಿ ಗ್ರಾಮದಲ್ಲಿ ಮಾಡಲಾಯಿತು ಸರ್ಕಾರಿ ಆಸ್ಪತ್ರೆ ರಸ್ತೆ ಸರ್ಕಾರಿ ಪದವಿ ಪೂರ್ವ ಕಾಲೇಜು ಸಂತೆ ಮಾರುಕಟ್ಟೆ ಶ್ರೀ ಇಂದ್ರೇಶ್ವರ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಇದೆ ತಿಂಗಳ 21 ರಂದು ಉದ್ಘಾಟನೆ ಮಾಡಲಾಗುತ್ತದೆ ಇನ್ನೂ ಹಲವಾರು ಅಭಿವೃದ್ಧಿಗೆ ನಾನು ಸದಾ ಸಿದ್ದ ಎಂದು ಹೇಳಿದರು.

ನಂತರ ಮಾತನಾಡಿದ ಡಾ.ಅಮರೇಶ ಮತ್ತು ಪ್ರಕಾಶಗೌಡ ವಣಗೇರಿ ಇವರು ಇಂದರಗಿ ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಆದಕಾರಣ 2023 ನೆ ಚುನಾವಣೆಯಲ್ಲಿ ಮತ್ತೊಮ್ಮೆ ಶಾಸಕರು ಆಗುವದರಲ್ಲಿ ಅನುಮಾನ ಇಲ್ಲಾ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿವಾನಂದ ಕುಂಬಾರ, ಹನುಮಂತಪ್ಪ ಕಟ್ಟಗಿಹಳ್ಳಿ, ಬಸವರಾಜ ಹಲಗೇರಿ, ಗವಿಸಿದ್ದಪ್ಪ ಹಡಪದ,ಬೇಡದಪ್ಪ ಹರಿಜನ, ದುರಗಪ್ಪ ಭೋವಿ, ಮಂಜುನಾಥ ಹೂಗಾರ, ತಿಮ್ಮಣ್ಣ ಪೂಜಾರ, ನಿಂಗಪ್ಪ, ಮಂಜುನಾಥ ಕುರಿ, ಇಂದ್ರೇಶ ಹಳ್ಳಿ, ವಿರೂಪಾಕ್ಷಿ ಕಮ್ಮಾರ, ಶಿವಪ್ಪ ಕಮ್ಮಾರ,ಬಸಪ್ಪ ಕುಂಬಾರ, ಹನುಮಂತಪ್ಪ ಕೆಂಗೇರಿ,ದುರಗೇಶ ಹರಿಜನ, ಶರಣಪ್ಪ ಬಿಳೇಬಾವಿ, ಬಸವರಾಜ ಈಳಗೇರ,ಇಂದ್ರೇಶ ಪೂಜಾರ ಮಂಜುನಾಥ ಧೋಟಿಹಾಳ ಸೇರಿದಂತೆ ಇತರರು ಇದ್ದರು.

## ಮದ್ದೂರು ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವ



ಬೆಳಗಾವಿ: ಯರಗಟ್ಟಿ ತಾಲೂಕಿನ ಮದ್ದೂರು ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವ ಜರುಗಲಿದ್ದು, ಫೆ.17 ರಿಂದ ಫೆ.19 ರ ವರೆಗೆ ವಿವಿಧ ಸಾಂಸ್ಕೃತಿಕ, ಹಾಗೂ ಕ್ರೀಡಾ ಕಾರ್ಯಕ್ರಮ ಜರುಗಲಿವೆ.

ಫೆ.18 ರಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಕಲ್ಮೇಶ್ವರ ಗದ್ದುಗೆ ಪೂಜೆ, ವೀಣಾ ಪೂಜೆಯೊಂದಿಗೆ ಪ್ರವಚನ, ಭಜನಾ ಮಂಡಳಿಯಿಂದ ಭಜನಾ ಹಾಗೂ ಡೊಳ್ಳಿನ ಪದಗಳ ಕಾರ್ಯಕ್ರಮ ನಡೆಯಲಿವೆ.


ಅದೇ ರೀತಿಯಲ್ಲಿ ಫೆ.18 ರಂದು ಬೆಳಿಗ್ಗೆ 6.30 ರಿಂದ ಶ್ರೀ ಕಲ್ಮೇಶ್ವರ ರುದ್ರಾಭಿಷೇಕ, ಶ್ರೀ ಶಿವರುದ್ರಯ್ಯ ಸ್ವಾಮಿಗಳ ಗದ್ದುಗೆ ಪೂಜೆ ನಡೆಯಲಿದೆ ಬಳಿಕ ಭಜನಾ ಮೇಳ ಜನಪ್ರಿಯ ಡೊಳ್ಳಿನ ಪದಗಳ ಕಾರ್ಯಕ್ರಮಗಳು ನಡೆಯಲಿವೆ.

ಫೆ.19 ರಂದು ಬೆಳಿಗ್ಗೆ 4 ರಿಂದ 10 ಗಂಟೆಯವರೆಗೆ ಶ್ರೀ ಕಲ್ಮೇಶ್ವರ ವಿಗ್ರಹದ ಪಲ್ಲಕ್ಕಿ ಉತ್ಸವ ಜರುಗಲಿದೆ. ಮಧ್ಯಾಹ್ನ 12 ಗಂಟೆಗೆ ಮಹಾ ಸ್ವಾಮಿಗಳ ಆಶೀರ್ವಚನದೊಂದಿಗೆ ಸಾಮೂಹಿಕ ವಿವಾಹಗಳು ನಡೆಯಲಿವೆ ನಂತರ ಸಾರ್ವಜನಿಕರಿಗೆ ಮಹಾ ಪ್ರಸಾದ ಸ್ವೀಕರಿಸಲು ವ್ಯವಸ್ಥೆ ಇರಲಿದೆ.

ಅದೇ ದಿನ ಸಂಜೆ 4 ಗಂಟೆಗೆ ಶ್ರೀ ಕಲ್ಮೇಶ್ವರ ರಥೋತ್ಸವ ನಡೆಯಲಿದೆ. ರಾತ್ರಿ 10.30 ಗಂಟೆಗೆ ಸುಂದರ ಸಾಮಾಜಿಕ ನಾಟಕಗಳಾದ ಹುತ್ತದಲ್ಲಿ ಕೈಯಿಟ್ಟ ಮುತ್ತೈದೆ ಹಾಗೂ ಮಾಂಗಲ್ಯ ಉಳಿಸಿದ ಮೈದುನ ನಾಟಕ ಪ್ರದರ್ಶನಗೊಳ್ಳಲಿವೆ.

ಮದ್ದೂರು ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವಕ್ಕೆ ಶ್ರೀ ಕಲ್ಮೇಶ್ವರ ಸರ್ವಧರ್ಮ ಸದ್ಭಕ್ತ ಮಂಡಳಿಯಿಂದ ಸರ್ವರಿಗೂ ಸ್ವಾಗತ ಕೋರಲಾಗಿದೆ.

## ದೋರನಹಳ್ಳಿ ಹಿರೇಮಠಕ್ಕೆ ಯೋಗ್ಯ ಉತ್ತರಾಧಿಕಾರಿ ಆಯ್ಕೆ: ಶ್ರೀ ರಂಭಾಪುರಿ ಜಗದ್ಗುರು



ಶಹಾಪೂರ: ಇತಿಹಾಸ ಮತ್ತು ಪವಿತ್ರ ಪರಂಪರೆಯನ್ನು ಹೊಂದಿದ ದೋರನಹಳ್ಳಿ ಸಂಸ್ಥಾನ ಹಿರೇಮಠಕ್ಕೆ ಆದಷ್ಟು ಬೇಗನೇ ಯೋಗ್ಯ ಉತ್ತರಾಧಿಕಾರಿ ನಿಯುಕ್ತಿಗೊಳಿಸಿ ಶ್ರೀ ಗುರು ಪಟ್ಟಾಧಿಕಾರ ನೆರವೇರಿಸಲಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಸ್ಪಷ್ಟಪಡಿಸಿದರು.

ಅವರು ಮಂಗಳವಾರ ತಾಲೂಕಿನ ದೋರನಹಳ್ಳಿ ಸಂಸ್ಥಾನ ಹಿರೇಮಠದಲ್ಲಿ ಸೇರಿದ ಶಿಷ್ಯ ಸದ್ಭಕ್ತ ಸಮೂಹವನ್ನು ಉದ್ದೇಶಿಸಿ ಆಶೀರ್ವಚನ ನೀಡುತ್ತಿದ್ದರು.

ರಜತ ಮಹೋತ್ಸವದ ಪೂರ್ವ ಸಿದ್ಧತೆಯಲ್ಲಿರುವಾಗಲೇ ವೀರಮಹಾಂತ ಶಿವಾಚಾರ್ಯ ಸ್ವಾಮಿಗಳು ತೀವ್ರ ಹೃದಯಾಘಾತದಿಂದ ಲಿಂಗೈಕ್ಯರಾದದ್ದು ನೋವಿನ ಸಂಗತಿ. ಶ್ರೀಮದ್ರಂಭಾಪುರಿ ಪೀಠದ ಶಾಖಾ ಮಠವೇ ಆಗಿರುವ ದೋರನಹಳ್ಳಿ ಸಂಸ್ಥಾನ ಹಿರೇಮಠದ ಕರ್ತೃ ಮಹಾಂತೇಶ್ವರರು ತಪಸ್ವಿಗಳು. ಶ್ರೀ ಮಠದ ಆದರ್ಶ ಗುರು ಪರಂಪರೆಯಲ್ಲಿ ಹಲವಾರು ಶ್ರೀಗಳವರು ಗುರುತ್ವಾಧಿಕಾರ ಸ್ವೀಕರಿಸಿ ಭಕ್ತರಿಗೆ ಮಾರ್ಗದರ್ಶನ ನೀಡಿದ್ದನ್ನು ಕಾಣುತ್ತೇವೆ. ಲಿಂ. ಶ್ರೀ ವೀರಮಹಾಂತ ಶಿವಾಚಾರ್ಯರ ಅಗಲಿಕೆಯಿಂದ ತೆರವಾದ ಸ್ಥಾನಕ್ಕೆ ಯೋಗ್ಯ ಸಮರ್ಥ ಗುರು ಪರಂಪರೆಯ ಶ್ರೀಗಳವರನ್ನು ಆಯ್ಕೆ ಮಾಡಿ ಮುಂದಿನ ಶುಭ ದಿನಗಳಲ್ಲಿ ಶ್ರೀ ಗುರು ಪಟ್ಟಾಧಿಕಾರ ನೆರವೇರಿಸಲಾಗುವುದೆಂದು ಸ್ಪಷ್ಟಪಡಿಸಿದ ಜಗದ್ಗುರುಗಳು ಲಿಂಗೈಕ್ಯ ಶ್ರೀಗಳವರು ಮಾಡಿದ ವ್ಯವಹಾರಗಳ ಪರಿಶೀಲನೆ ಮತ್ತು ಶೋಧನಾ ಕಾರ್ಯದ ಜವಾಬ್ದಾರಿ ಆಪ್ತ ವಲಯದ ಧುರೀಣರ ಮೇಲೆ ಇದೆ. ಮುಂದಿನ ಉತ್ತರಾಧಿಕಾರಿ ನಿಯುಕ್ತಿಗೊಳಿಸಿ ಪಟ್ಟಾಧಿಕಾರ ನೆರವೇರಿಸುವ ತನಕ ಸ್ಥಳೀಯ ಚಿಕ್ಕಮಠದ ಶಿವಲಿಂಗ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಮಠದ ಪ್ರಮುಖರು ದೈನಂದಿನ ಕಾರ್ಯ ನಿರ್ವಹಿಸಿ ಲೆಕ್ಕ ಪತ್ರ ಇಡಲು ನಿರ್ದೇಶನ ನೀಡಿದರು.

ಸಮಾರಂಭದಲ್ಲಿ ಪಾಲ್ಗೊಂಡ ಎಲ್ಲ ಸದ್ಭಕ್ತರ ಅಭಿಪ್ರಾಯಗಳನ್ನು ಆಲಿಸಿ ಕೊನೆಗೆ ಸ್ಪಷ್ಟ ಸಂದೇಶ ನೀಡಿದ ಜಗದ್ಗುರುಗಳವರ ನಿರ್ಧಾರವನ್ನು ಭಕ್ತರು ಕರತಾಡನ ಮಾಡುವ ಮೂಲಕ ಒಪ್ಪಿಗೆಯನ್ನಿತ್ತರು.

ಸಮಾರಂಭದ ನೇತೃತ್ವವನ್ನು ಶಿವಲಿಂಗ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ವಹಿಸಿದ್ದರು. ಕಡಕೋಳ ಮಡಿವಾಳೇಶ್ವರ ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಕೆಂಭಾವಿ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶಹಪುರ ಚರಬಸವೇಶ್ವರ ಗದ್ದುಗೆಯ ಬಸಯ್ಯ ತಾತ, ಈಶ್ವರಪ್ಪಗೌಡ ಲಕ್ಕಶೆಟ್ಟಿ, ನಿಂಗನಗೌಡ ಪೋಲೀಸ ಪಾಟೀಲ, ವೀರಸಂಗಪ್ಪ ದೇಸಾಯಿ, ಷಣ್ಮುಖಪ್ಪ ಕಕ್ಕೇರಿ ಇನ್ನೂ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

ಗಣಪತರಾಯಗೌಡ ಜೋಳದ ಸ್ವಾಗತಿಸಿದರು. ಮಹೇಶ ಪತ್ತಾರ ನಿರೂಪಿಸಿದರು.

## ಟೆಂಡರ್ ಆಹ್ವಾನ


ಬೆಳಗಾವಿ: ರಾಯಬಾಗ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಛೇ- ರಿಯ ಅಧೀಕೃತ ಕೆಲಸಕ್ಕಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಡಾ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಸಾರಿಗೆ/ಪ್ರವಾಸೋಧ್ಯಮ ಇಲಾಖೆಗಳಿಂದ ಹಾಗೂ ಇತರೆ ಸರ್ಕಾರಿ ಇಲಾಖಾ/ನಿಗಮಗಳ/ ಮಹಾನಗರ ಪಾಲಿಕೆಗಳ ವತಿಯಿಂದ ಪಡೆದ ಸಹಾಯಧನದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಫಲಾನುಭವಿಗಳು ಪಡೆದ ಚಾಲಕ ಸಹಿತ ವಾಹನವನ್ನು ಬಾಡಿಗೆ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಾಹನಗಳು:

ಟಾಟಾಸುಮೋ, ಬುಲೇರೊ, ಇರಟಿಗಾ, ಸ್ವಿಪ್ಟಡಿಸೈರ್, ಸ್ವಿಪ್ಟ/ಬ್ರಿಜಾ 4 ಚಕ್ರಗಳ ಎಲ್.ಎಮ್.ವಿ ವಾಹನಗಳನ್ನು 12 ತಿಂಗಳ (1 ಮಾರ್ಚ 2023 ರಿಂದ 29 ಫೆಬ್ರುವರಿ 2024) ರ ಕಾಲಮಿತಿಗೆ ಸೇವೆ ಒದಗಿಸಲು ನಿಯಮಾನುಸಾರ ಷರತ್ತು ನಿಭಂದನೆಗಳನ್ನೊಳಪಟ್ಟು ಆಸಕ್ತರಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಆಸಕ್ತರು ರಾಯಬಾಗ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಕಛೇರಿಯಲ್ಲಿ ನಿಗದಿತ ಪ್ರತ್ಯೇಕ ಅರ್ಜಿಗಳನ್ನು ಫೆ.6 2023 ರಿಂದ ಫೆ.20 2023ರ ಮಧ್ಯಾಹ್ನ 1 ಗಂಟೆಯ ವರೆಗೆ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ದ್ವಿ-ಲಕೋಟೆ, ತಾಂತ್ರಿಕ ಲಕೋಟೆ, ಹಣಕಾಸು ಲಕೋಟೆಗಳಲ್ಲಿ ಫೆ.21 2023 ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

ಫೆ.22 2023 ರಂದು ತಾಂತ್ರಿಕ ಲಕೋಟೆಯನ್ನು ಬೆಳಗ್ಗೆ 11 ಗಂಟೆಗೆ ಹಾಜರಿರಬಹುದಾದ ಅರ್ಜಿದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಎಲ್ಲಾ ಷರತ್ತುಗಳನ್ನು ಪೂರೈಸಿದ ಅರ್ಹ ತಾಂತ್ರಿಕ ಲಕೋಟೆ ಇರುವ ಅರ್ಜಿದಾರರ ಎರಡನೇ ಹಣಕಾಸು ಲಕೋಟೆಯನ್ನು ಅದೇ ದಿನ ಮಧ್ಯಾಹ್ನ 12.30 ಗಂಟೆಗೆ ತೆರೆಯಲಾಗುವುದು.ಕಡಿಮೆ ದರ ಪಟ್ಟಿ ಮತ್ತು ಕೋರಿದ ಎಲ್ಲ ಚಾಲ್ತಿ ದಾಖಲೆಗಳನ್ನು ಸಲ್ಲಿಸಿದ ಅರ್ಜಿದಾರರಿಗೆ ಆದೇಶ ಪತ್ರ ನೀಡಲಾಗುವುದು. ಷರತ್ತು/ನಿಭಂದನೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ಅಥವಾ ಕಛೇರಿ ದೂರವಾಣಿ ಸಂಖ್ಯೆ 08331-200118/9480843070 ಗೆ ಸಂಪರ್ಕಿಸಬಹುದು ಎಂದು ರಾಯಬಾಗ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಹುಳಿಯಾರು: ಸಮೀಪದ ಬೊಮ್ಮೇನಹಳ್ಳಿಯ ಮಂಜುನಾಥ್ ಅವರನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೆ.ಡಿ.ಎಸ್ ಪಕ್ಷಕ್ಕೆ ನೂತನ ಉಪಾಧ್ಯಕ್ಷರನ್ನಾಗಿ ಜಿಲ್ಲಾಧ್ಯಕ್ಷರ ಸೂಚನೆಯ ಮೇರೆಗೆ ತಾಲ್ಲೂಕು ಜೆಡಿಎಸ್ ಅಧ್ಯಕ್ಷರಾದ ರಾಮಚಂದ್ರಯ್ಯ ಅವರು ನೇಮಿಸಲಾಯಿತು. ಮಾಜಿ ಶಾಸಕರಾದ ಸಿ.ಬಿ.ಸುರೇಶ್‌ಬಾಬು ರವರು ಸೋಮವಾರ ಆದೇಶಪತ್ರ ವಿತರಿಸಿದರು.

## ಫೆ. 17 ರಿಂದ ಬಡೇಕೊಳ್ಳಮಠದಲ್ಲಿ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ

ಬಡೆಕೊಳ್ಳಮಠ: ಬೆಳಗಾವಿ ತಾಲೂಕಿನ ಶ್ರೀ ಪಾವನಕ್ಷೇತ್ರ ಬಡೇಕೊಳ್ಳಮಠದ ಪವಾಡ ಪುರುಷ ಶ್ರೀ ನಾಗೇಂದ್ರ ಮಹಾಸ್ವಾಮಿಗಳವರ ಮಹಾಶಿವರಾತ್ರಿಯ ಜಾತ್ರೆಯು ಪ್ರತಿ ವರ್ಷದಂತೆ ಐದು ದಿನಗಳ ಕಾರ್ಯಕ್ರಮಗಳೊಂದಿಗೆ ಶ್ರದ್ದೆ ಮತ್ತು ಸಡಗರದಿಂದ ಜರಗಲಿದೆ. ಈ ಜಾತ್ರಾ ನಿಮಿತ್ಯ ಕಾರ್ಯಕ್ರಮಗಳನ್ನು ಆಯೋಜನೆಗೊಂಡಿದ್ದು, ಭಕ್ತ ವೃಂದವು ಆಗಮಿಸಿ ಪೂಜ್ಯ ಅಜ್ಜನವರ ಆರ್ಶಿವಾದ ಅನುಗ್ರಹಕ್ಕೆ ಪಾತ್ರರಾಗಿ ಕೃತಾರ್ಥರಾಗಬೇಕು.

ಶುಕ್ರವಾರ ದಿನಾಂಕ 17-02-2023 ರಂದು ಸಾಯಂಕಾಲ 5 ಗಂಟೆಗೆ ಶ್ರೀ ಶಿವಯೋಗಿ ನಾಗೇಂದ್ರ ಮಹಾಸ್ವಾಮಿಗಳ ಸಂತಿಬಸ್ತವಾಡದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಬರುವ ದ್ವಜ, ಶಿಂದೊಳ್ಳಿಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಶ್ರೀ ಬಸವಗುರು ಸೇವಾ ಭಜನಾ ಸಂಘದ ನೇತ್ರತ್ವದಲ್ಲಿ ತರುವ ದ್ವಜ ಸೂತ್ರಗಳಿಂದ ಶ್ರೀ ಸದ್ಗುರು ನಾಗೇಂದ್ರ ಶಿವಯೋಗಿಗಳವರ ಮಠದ ಪರಂಪರೆಯ ಧರ್ಮಲಾಂಛನದ್ಯೂತಕವಾದ ದ್ವಜಾರೋಹಣದೊಂದಿಗೆ ಜಾತ್ರಯ ಪ್ರಾರಂಭ.

ಶನಿವಾರ ದಿ. 18-02-2023 ರಂದು ವಿಶ್ವಶಾಂತಿಗಾಗಿ ಶ್ರೀಮಠದಲ್ಲಿ ಮಹಾರುದ್ರಾಭಿಷೇಕ ನಂತರ ಮುಂ. 9.30 ಗಂಟೆಗೆ ಶ್ರೀ ಕಲ್ಲಯ್ಯ ಶಾಸ್ತ್ರಿ ಉದೋಶಿಮಠ ಹಿರೇಮಬಾಗೇವಾಡಿ ಹಾಗೂ ಸಂಗಡಿಗರು ಇವರ ನೇತ್ರತ್ವದಲ್ಲಿ ಹೋಮ. ಸಂಜೆ 4 ಗಂಟೆಗೆ ಪರಮಪೂಜ್ಯ ಶ್ರೀ ನಾಗೇಂದ್ರ ಸ್ವಾಮಿಗಳ ಪರಮ ಭಕ್ತರಾದ ಶ್ರೀ ರುದ್ರಗೌಡ ಬ. ಪಾಟೀಲ, ಮಾಸ್ತಮರಡಿ ಇವರಿಂದ ನಿರ್ಮಿತವಾದ ಶ್ರೀ ನಾಗೇಂದ್ರ ಶಿವಾಲಯದಿಂದ ಪಲ್ಲಕ್ಕಿ, ಛತ್ರ ಚಾಮರ ಅಪ್ತಾಗಿರಿ, ಬೆತ್ತ ಮತ್ತು ಅಂಬಲಿ ಗುಗ್ಗರಿಗಳಿಂದೊಡಗೂಡಿ ಭಕ್ತ ಸಮೂಹದೊಂದಿಗೆ ಆಗಮಿಸಿದ ಹಾಗೂ ತಾರಿಹಾಳ ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಆಗಮಿಸಿದ ಪಲ್ಲಕ್ಕಿಗಳನ್ನು ಶ್ರೀಗಳು ಹಾಗೂ ಮಠದ ಭಕ್ತರಿಂದ ವಾದ್ಯ ಮೇಳದೊಂದಿಗೆ ಬರಮಾಡಿಕೊಳ್ಳುವದು. ಮಾಸ್ತಮರ್ಡಿ ಹರಿಭಜನಾ ಮಂಡಳಿ ನೇತ್ರತ್ವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಹರಿಭಜನಾ ಮಂಡಳಿಗಳು ಪಾಲ್ಗೊಳ್ಳುವವು. 8-15 ಗಂಟೆಯಿಂದ ಹ.ಭ.ಪ. ಶ್ರೀ ಗಿರಿಮಲ್ಲ ಮಹಾರಾಜ ಹಾಗೂ ಮಂಡಳಿ, ಸಾಂಬ್ರಾ ಇವರಿಂದ ಕೀರ್ತನೆ. ಮತ್ತು ಶ್ರೀ ಸಿದ್ದೇಶ್ವರ ಭಜನಾ ಸಂಘ ಹಿರೇಬಾಗೇವಾಡಿ ಇವರಿಂದ ಭಜನೆ. ರವಿವಾರ ದಿನಾಂಕ: 19-02-2023 ರಂದು ಬೆಳಿಗ್ಗೆ 8 ಗಂಟೆಯಿಂದ ಮಹಾರುದ್ರಾಭಿಷೇಕ, 11.30 ರಿಂದ ಶ್ರೀಗಳವರ ಪಾದಪೂಜೆ, ಮಧ್ಯಾಹ್ನ 1-00 ಗಂಟೆಗೆ ರಥೋತ್ಸವ ಮ. 2-30 ಕ್ಕೆ ಮಹಾಪ್ರಸಾದ ಸಂಜೆ 4 ಗಂಟೆಗ ಶ್ರೀ ಬಲಭೀಮ ಯುವಕ ಮಂಡಳ, ಯರಮಳ್ಳಿ ಇವರಿಂದ ಸೈಕಲ್ ವೃತ್ತಾಕಾರ ಚಲನೆಯ ಕಾರ್ಯಕ್ರಮಗಳು. ಸಾ. 6.30 ಗಂಟೆಗೆ ಹಿರೇಬಾಗೇವಾಡಿ ಶಾಲಾ ಬಾಲಕ-ಬಾಲಕಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು. ರಾತ್ರಿ 10.30ಘಂಟೆಗೆ ಆನಂದ ಸೌಂಡ್ಸ್ ಹಿರೇಬಾಗೇವಾಡಿ ಇವರಿಂದ ರಸಮಂಜರಿ ಕಾರ್ಯಕ್ರಮಗಳು ಜರುಗಲಿವೆ. ಸೋಮವಾರ ದಿ. 20-02-2023 ರಂದು ಮುಂ.8 ರಿಂದ 2.00 ರವರೆಗೆ ವಿವಿಧ ಊರುಗಳ ಭಜನಾ ಮಂಡಳಿಗಳಿಂದ ಭಜನೆ ಹಾಗೂ ಕೀರ್ತನೆ ಕಾರ್ಯಕ್ರಮ, ಮಧ್ಯಾಹ್ನ 3 ಗಂಟೆಗೆ ಹಿರೇಬಾಗೇವಾಡಿ

ಭಕ್ತಾದಿಗಳ ನೇತ್ರತ್ವದಲ್ಲಿ ಬಯಲು ಕುಸ್ತಿಗಳು, ರಾತ್ರಿ 10.30 ಕ್ಕೆ ಆನಂದ ಸೌಂಡ್ಸ್ ಹಿರೇಬಾಗೇವಾಡಿ ಇವರಿಂದ ನಗೆಹಬ್ಬ ಕಾರ್ಯಕ್ರಮ ಜರುಗಲಿವೆ. ಮಂಗಳವಾರ ದಿ. 21-02-2023 ರಂದು ಮದ್ಯಾಹ್ನ 2 ಗಂಟೆಗ್ಕೆ ಪಲ್ಲಕ್ಕಿ ಬಿಳ್ಕೊಡುವ ಸಮಾರಂಭ, ಸಂಜೆ 4 ಗಂಟೆಗ ದ್ವಜಾರೋಹಣದೊಂದಿಗೆ ಜಾತ್ರೆಯ ಮುಕ್ತಾಯ ಈ ಜಾತ್ರೆಗೆ ಸದ್ಭಕ್ತರು ಆಗಮಿಸಿ ದರ್ಶನ ಆರ್ಶಿವಾದ ಪಡೆದುಕೊಂಡು ಪುನೀತರಾಗಬೇಕೆಂದು ಶ್ರೀ ಪರಮಪೂಜ್ಯ ನಾಗಯ್ಯ ಸ್ವಾಮಿಗಳು ಪಾವನಕ್ಷೇತ್ರ ಬಡೇಕೊಳ್ಳಮಠ, ತಾರಿಹಾಳ ತಾ:ಜಿ: ಬೆಳಗಾವಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದುರ್ಗಮ್ಮ ದೇವಿ ಜಾತ್ರಾ ಮಹೋತ್ಸವ



ವಿಜಯಪುರ: ಜಿಲ್ಲೆಯ ತಾಳಿಕೋಟಿ ತಾಲೂಕಿನ ಗೊಂದಳಿ ಸಮಾಜದ ಶ್ರೀ ದುರ್ಗಮ್ಮ ದೇವಿ ಜಾತ್ರೆ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯಲಿರುವ ಈ ಜಾತ್ರೆ ಈ ವರ್ಷ ಕೂಡ ಅದ್ದೂರಿಯಾಗಿ ಜಾತ್ರ ನಡೆಯಿತು ಈ ದೇವಿಯ ರಥ ಅಂಬಾ ಭವಾನಿ ಮಂದಿರದಿಂದ ಗೊಂದಳೇ ಸಮಾಜದ ಗಲ್ಲಿಯವರೆಗೂ ಮೆರವಣಿಗೆಯಲ್ಲಿ ಸನ್ಮಾನ್ಯ ಶ್ರೀ ಎ ಎಸ್ ಪಾಟೀಲ್ ನಡಹಳ್ಳಿ ಶಾಸಕರು ಹಾಗೂ ಪುರಸಭಾ ಸದಸ್ಯರಾದ ಜೈ ಸಿಂಗ್ ಮೂಲಿಮನಿ ನಿಂಗು ಕುಂಟೋಜಿ ಗಂಗಾರಾಮ್ ಹಜೇರಿ ಗೊಂದಳಿ ಸಮಾಜದ ಹಿರಿಯರಾದ ವಿಟ್ಟಲ್ ಸೂರ್ಯವಂಶಿ ಶಿವಾಜಿ ಸೂರ್ಯವಂಶಿ ತುಕರಾಮ್ ಸೂರ್ಯವಂಶಿ ರಾಜು ವಾಗುಮೊರೆ ಪರಶುರಾಮ್ ಪಾರಿಗೆ ಅಪ್ಪಣ್ಣ ಸೂರ್ಯವಂಶಿ ಅಪ್ಪು ಸೂರ್ಯವಂಶಿ ಗುಲ್ಬರ್ಗ ಇತರರು ಉಪಸ್ಥಿತರಿದ್ದರು.

## ಬೃಹತ್ ಸೇರ್ಪಡೆ ಕಾರ್ಯಕ್ರಮ



ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಸುಂಕದಕಟ್ಟೆಯ ವಾರ್ಡ್ ನಂಬರ್ 27ರಲ್ಲಿ ಬೃಹತ್ ಸೇರ್ಪಡೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಮಾಜಿ ಶಾಸಕರಾದ ಎಸ್ ಮುನಿರಾಜು ಅವರ ಸಮ್ಮುಖದಲ್ಲಿ ಹಾಗೂ ಎಚ್.ಆರ್. ಪ್ರಕಾಶ್ ಅವರ ನೇತೃತ್ವದಲ್ಲಿ ನೂರಾರು ಜೆಡಿಎಸ್ ಕಾರ್ಯಕರ್ತರು ಪಕ್ಷ ತೊರೆದು ಭಾರತೀಯ ಜನತ ಪಕ್ಷಕ್ಕೆಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದ ಎಸ್ ಮುನಿರಾಜು ಅವರು ದಾಸರಹಳ್ಳಿ ಶಾಸಕರಾದ ಆರ್ .ಮಂಜುನಾಥ್ ಕ್ಷೇತ್ರದಲ್ಲಿ ಸರಿಯಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಮಾಜಿ ಶಾಸಕರು ನನಗೆ ಕೆಲಸ ಮಾಡಲು ಬಿಡುತ್ತಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದು ತಾಕತ್ತಿದ್ದರೆ ಈ ವಿಷಯವನ್ನು ಆದಿವೇಶನದಲ್ಲಿ ಪ್ರಶ್ನಿಸಬೇಕು ಅದು ಬಿಟ್ಟು ದಾಸರಹಳ್ಳಿ ಜನರ ಕಿವಿಗೆ ಹೂಡಲು ಜನರೇನೋ ದಡ್ಡರಲ್ಲ ಈ ಈ ಬಾರಿ ದಾಸರಹಳ್ಳಿ ಕ್ಷೇತ್ರದ ಜನರು ಮನೆ ಕಡೆ ಮಂಜಣ್ಣ ಎಂಬುದನ್ನು ತೋರಿಸಲಿದ್ದಾರೆ ಎಂದು ಶಾಸಕರ ವಿರುದ್ಧ ಹರಿ ಹಾಯ್ದರು.

## ಫೆ. 25 ರವರೆಗೆ ಬೋಗಸ್ ಕಾರ್ಮಿಕ ಕಾರ್ಡ್ ನೋಂದಣಿ ರದ್ಧತಿ ಅಭಿಯಾನ

ಕೊಪ್ಪಳ: ಜಿಲ್ಲಾ ಕಾರ್ಮಿಕ ಇಲಾಖೆಯಿಂದ ನಕಲಿ ದಾಖಲಾತಿ ಸೃಷ್ಠಿಸಿ ಗುರುತಿನ ಚೀಟಿ ಪಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಲ್ಲದವರ ಕಾರ್ಡುಗಳನ್ನು ರದ್ದುಪಡಿಸಲು ಫೆಬ್ರವರಿ 25 ರವರೆಗೆ ಬೋಗಸ್ ಕಾರ್ಡ್ ನೋಂದಣಿ ರದ್ಧತಿ ಅಭಿಯಾನ ಕೈಗೊಳ್ಳಲಾಗಿದೆ.

ನಕಲಿ ದಾಖಲಾತಿ ಸೃಷ್ಠಿಸಿ ಗುರುತಿನ ಚೀಟಿ ಪಡೆದಿರುವ ಫಲಾನುಭವಿಗಳು ಸ್ವ–ಇಚ್ಛೆಯಿಂದ ಮಂಡಳಿಗೆ ಗುರುತಿನ ಚೀಟಿಯನ್ನು ಹಿಂತಿರುಗಿಸಿದಿದ್ದಲ್ಲಿ ಮುಂದಿನ ಕಾನೂನು ಕ್ರಮವನ್ನು ಕೈಬಿಡಲಾಗುವುದು ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ರವರು ಆದೇಶ ಹೊರಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪರಿಶೀಲನೆಗೆ ಒಳಗಾದ ಫಲಾನುಭವಿಯು ನಕಲು ದಾಖಲಾತಿಯನ್ನು ಸೃಷ್ಠಿಸಿ ನೋಂದಣಿಯಾಗಿರುವುದು ಕಂಡುಬಂದಲ್ಲಿ, ಸರ್ಕಾರದ ಅಧಿಸೂಚನೆ 2022ರ ಆಗಸ್ಟ್ 18ರ ತಿದ್ದುಪಡಿ ನಿಯಮ–20(7)ರನ್ವಯ ಕಾರ್ಮಿಕರ ನೋಂದಣಾಧಿಕಾರಿಯು ತನ್ನ ಅಧಿಕಾರವನ್ನು ಚಲಾಯಿಸಿ, ಸೇವಾಸಿಂಧು ತಂತ್ರಾಂಶದಲ್ಲಿ ಅಂತಹ ಫಲಾನುಭವಿಯ ನೋಂದಣಿಯನ್ನು 'ಫ್ರೀಜ್' ಮಾಡುವುದು ಮತ್ತು ಆ ಫಲಾನುಭವಿಯ ವೈಯಕ್ತಿಕ ಕಡತದಲ್ಲೂ ರದ್ಧತಿಯನ್ನು ದಾಖಲಿಸುವುದಾಗಿದೆ.

ಅಭಿಯಾನ ಸಂದರ್ಭದಲ್ಲಿ ಬೋಗಸ್ ಫಲಾನುಭವಿಯು ಸ್ವ–ಇಚ್ಛೆಯಿಂದ ನಕಲು ನೋಂದಣಿಯನ್ನು ಒಪ್ಪಿಕೊಂಡು ಗುರುತಿನ ಚೀಟಿಯನ್ನು ಹಿಂದಿರುಗಿಸದಿದ್ದಲ್ಲಿ, ಅವರಿಂದ ಒಪ್ಪಿಗೆ ಪತ್ರವನ್ನು ಪಡೆದು ಅವರ ಮೇಲಿನ ಮುಂದಿನ ಕಾನೂನು ಕ್ರಮವನ್ನು ಕೈಬಿಡುವುದು ಮತ್ತು ನೋಂದಣಿ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಫ್ರೀಜ್/ ರದ್ದು ಮಾಡುವುದು ಮತ್ತು ಕಡತದಲ್ಲಿ ರದ್ದುಗೊಳಿಸುವುದು ಹಾಗೂ ಈಗಾಗಲೇ ಪಡೆದಿರುವ ವಿವಿಧ ಸೌಲಭ್ಯಗಳನ್ನು ವಸೂಲಿ ಮಾಡಲು ಕ್ರಮಕ್ಕೈಗೊಳ್ಳುವುದು.

ಅಭಿಯಾನದ ನಂತರವು ಸಂಬಂಧಪಟ್ಟ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರು ಅಥವಾ ನೋಂದಣಾಧಿಕಾರಿಯು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬೋಗಸ್ ಕಾರ್ಡುಗಳನ್ನು ಗುರುತಿಸಿ ರದ್ದುಗೊಳಿಸುವ ಕಾರ್ಯವನ್ನು ನಿರಂತರವಾಗಿ ನಿರ್ವಹಿಸುವರು.

ಈ ನಿಟ್ಟಿನಲ್ಲಿ ಫೆಬ್ರವರಿ 25 ರವರೆಗೆ ಬೋಗಸ್ ಕಾರ್ಡು ನೋಂದಣಿ ರದ್ಧತಿ ಅಭಿಯಾನ ನಡೆಯಲಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗವಿಕಲ ವಿದ್ಯಾರ್ಥಿನಿಯರ ವಸತಿ ನಿಲಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ: ನಗರದ ಶ್ರೀ ರೇಣುಕಾ ದೇವಿ ಉದ್ಯೋಸ್ತ ಅಂಗವಿಕಲ ಹಾಗೂ ಅಂಗವಿಕಲ ವಿದ್ಯಾರ್ಥಿನಿಯರ ವಸತಿ ನಿಲಯ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯಾವುದೇ ಉದ್ಯೋಗದಲ್ಲಿರುವ ವಿದ್ಯಾರ್ಥಿನಿಯರು, ವಿವಿಧ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪಡೆದ ಹಾಗೂ ತರಬೇತಿ ಪಡಯುತ್ತಿರುವ ವಿದ್ಯಾರ್ಥಿನಿಯರಿಗೆ ವಸತಿ ನಿಲಯ ಪ್ರವೇಶವನ್ನು ಪಡೆಯಬಹುದು.

ಜಿಲ್ಲೆಯ ಆಸಕ್ತ ಉದ್ಯೋಗಸ್ತ ಅಂಗವಿಕಲರು, ಅಂಗವಿಕಲ ವಿದ್ಯಾರ್ಥಿನಿಯರು ಅರ್ಜಿಗಳನ್ನು ಸಲ್ಲಿಸಬಹುದು.

ಪ್ರವೇಶ ಪಡೆದಂತಹ ಅಂಗವಿಕಲ ವಿದ್ಯಾರ್ಥಿನಿಯರಿಗೆ ವಸತಿ, ಊಟ, ಹಾಗೂ ಹೊದಿಕೆಯನ್ನು ಉಚಿತವಾಗಿ ನೀಡಲಾಗುವುದು.

ಅರ್ಜಿ ಸಲ್ಲಿಸವ ಕೊನೆಯ ದಿನಾಂಕ ಫೆ.20 2023 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 9448974894 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಸಂಚಾಲಕರಾದ ಸವಿತಾ ಎಸ್. ಕಾಂಬಳೆ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ನೇಕಾರ ಸಮ್ಮಾನ ಯೋಜನೆಯಡಿ ನೇಕಾರರು ಹಾಗೂ ಕಾರ್ಮಿಕರಿಗೆ ಆರ್ಥಿಕ ನೆರವು

ಬೆಳಗಾವಿ : ವಿದ್ಯುತ್ ಮಗ್ಗ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳ ನೇಕಾರರು ಹಾಗೂ ಕಾರ್ಮಿಕರಿಗೆ ತಲಾ ರೂ.5,000/– ಗಳ ವಾರ್ಷಿಕ ಆರ್ಥಿಕ ನೆರವು ನೀಡುವ ನೇಕಾರ ಸಮ್ಮಾನ(ವಿದ್ಯುತ್ ಮಗ್ಗ) ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.

ಸದರಿ ಯೋಜನೆಯಡಿ ನೆರವು ಪಡೆಯಲು ನೇಕಾರರ ಘಟಕಗಳು ವಿದ್ಯುತ್ ಮಗ್ಗ ಗಣತಿಯಲ್ಲಿ ನೋಂದಾಯಿಸಿಕೊಂಡಿರಬೇಕು. ಸದರಿ ಗಣತಿಯನ್ನು ಎ.ಐ.ಎಮ್.ಎಸ್ ಸಂಸ್ಥೆಯಿಂದ ಕೈಗೊಳ್ಳಲಾಗುತ್ತಿದ್ದು, ಗಣತಿಯಲ್ಲಿ ನೋಂದಾಯಿಸಲು ಬಿಟ್ಟು ಹೋದ ಘಟಕದವರು ಯಾವುದೇ ಮಧ್ಯವರ್ತಿಗಳ ಆಸೆ–ಆಮಿಷಕ್ಕೆ ಒಳಗಾಗದೇ, ನೇರವಾಗಿ ಈ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ನೇಕಾರ ಸಮ್ಮಾನ ಯೋಜನೆಯಡಿ ಆರ್ಥಿಕ ನೆರವನ್ನು ಪಡೆಯಲು ಯಾವುದೇ ಅರ್ಜಿ ಅಥವಾ ಆನ್‌ಲೈನ್ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ ಹಾಗೂ ಯಾವುದೇ ಶುಲ್ಕ ಇರುವುದಿಲ್ಲ.ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 0831–2950674 ಗೆ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಜಿಲ್ಲಾ ಪಂಚಾಯತ್ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇಹ ಬಲದ ಜೊತೆಗೆ ಆತ್ಮ ಮತ್ತು ಮನೋಬಲ ಬೆಳೆಸಿಕೊಳ್ಳಿ: ಡಿಸಿಪಿ ಪಿ.ವಿ. ಸ್ನೇಹ

ಬೆಳಗಾವಿ: ನಗರದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದ ಪ್ರಾಧ್ಯಾಪಕ ವಿಜಯ ಎಫ್. ನಾಗಣ್ಣನವರ್ ದಲಿತ ಮಹಿಳೆ ಮತ್ತು ಸಾಹಿತ್ಯದ ಕುರಿತು ಮಾತನಾಡಿದರು.

ದಲಿತ ಹೆಣ್ಣುಮಕ್ಕಳು ಮೂರು ಸಾವಿರ ವರ್ಷಗಳಿಂದ ತುಳಿತಕ್ಕೊಳಗಾಗಿದ್ದಾರೆ. ಇವರು ಎರಡು ರೀತಿಯ ಶೋಷಣೆಗಳನ್ನು ಅನುಭವಿಸುತ್ತಿದ್ದಾರೆ. ಒಂದು ಹೆಣ್ಣು ಎನ್ನುವ ಕಾರಣವಾದರೆ, ಇನ್ನೊಂದು ದಲಿತ ಎನ್ನುವುದಾಗಿದೆ. ದಲಿತ ಸಾಹಿತ್ಯದಲ್ಲಿ ನೋವು ತಲ್ಲಣಗಳು ಒಬ್ಬರ ಕಥೆಯಾಗಿರುವುದಿಲ್ಲ; ಅದು ಸಮುದಾಯದ ಕಥೆಯಾಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದಲಿತ ಮಹಿಳೆಯರ ಸ್ಥಿತಿಗತಿ ಒಂದೇ ಆಗಿದೆ.




ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರಯತ್ನದಿಂದ ಇಂದು ಮಹಿಳೆಯರು ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಧನೆಯನ್ನು ಮಾಡುತ್ತಿದ್ದಾರೆ. ಮುಕ್ತ ಸಾಳ್ವೆ ಮೊದಲ ದಲಿತ ಬರಹಗಾರ್ತಿ. ಇವಳ ತರುವಾಯ ಇಂದು ಅನೇಕ ದಲಿತ ಮಹಿಳೆಯರು ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಜಾತಿ ಎನ್ನುವ ಮನೋವ್ಯಾಧಿ, ಶೋಷಣೆ ಕೇವಲ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಮುಂದುವರಿದ ದೇಶವಾದ ಅಮೇರಿಕಾದಲ್ಲಿಯೂ ಕಾಣುತ್ತೇವೆ. ಇದ–ರಿಂದ ಹೊರಬರಲು ನಮಗೆ ನಾವೇ ಪ್ರಂರುತ್ನಿಸಬೇಕು,ಸಂಘಟಕರಾಗಬೇಕು. ದಲಿತ ಎನ್ನುವುದು ದೇವರು ಕೊಟ್ಟಿದ್ದಲ್ಲ ಮನುಷ್ಯ ಕೊಟ್ಟಿದ್ದು ಎಂದರು.

ಬೆಳಗಾವಿಯ ಅಪರಾಧ ಮತ್ತು ಸಂಚಾರದ ಉಪ ಪೊಲೀಸ್ ಆಯುಕ್ತರಾದ ಪಿ. ವಿ. ಸ್ನೇಹ ಅವರು ಮಹಿಳಾ ಸಬಲೀಕರಣದ ಕುರಿತು ಮಾತನಾಡಿದರು. ಸ್ವಾವಲಂಬನೆ ಎನ್ನುವುದು ಹೊರಗಿನಿಂದಲೇ ಬರುವುದಲ್ಲ ಅದು ಪ್ರತಿಯೊಬ್ಬ ಮಹಿಳೆಯ ಅಂತರಾಳದಿಂದ ಬರಬೇಕು. ಬಹುತೇಕ ಕುಟುಂಬದ ಹಣಕಾಸಿನ ವ್ಯವಹಾರವೆಲ್ಲ ಪುರುಷರೇ ನಿಭಾಯಿಸುತ್ತಾರೆ. ಮಹಿಳೆಗೆ ಸ್ವಾತಂತ್ರ್ಯ ಎಂಬುದು ಕೇವಲ ಓಡಾಟ–ಕ್ಕೆ ಸೀಮಿತವಲ್ಲ, ಅವಳು ನಿರ್ವಹಿಸುವ ಎಲ್ಲಾ ಕೆಲಸ–ಕಾರ್ಯಗಳಲ್ಲಿರಬೇಕು. ಪ್ರತಿಯೊಂದು ವಿಷಯಗಳಲ್ಲಿ ಅವಳು ಸ್ವಂತ ನಿರ್ಧಾರಗಳನ್ನು ಕೈಗೊಳ್ಳುವಂತಾಗಬೇಕು.

ಇದಕ್ಕೆ ಅವಳು ದೇಹಬಲದ ಜೊತೆಗೆ ಆತ್ಮಬಲ, ಮನೋಬಲ ಬೆಳೆಸಿಕೊಳ್ಳಬೇಕು. ಪ್ರತಿಯೊಂದು ಕೆಲಸವನ್ನೂ ಶ್ರದ್ಧೆ, ಪ್ರಾಮಾಣಿಕತೆಯಿಂದ ಮಾಡಿ. ಆಗ ನೀವು ಎಲ್ಲರಿಗಿಂತಲೂ ವಿಭಿನ್ನವಾಗಿ ಬೆಳೆಯಬಲ್ಲಿರಿ. ವಿದ್ಯಾರ್ಥಿನಿಯರು ತಾವು ಏನು ಕಲಿತಿದ್ದೇವು ಎನ್ನುವುದಕ್ಕಿಂತ ಕಲಿತದರಲ್ಲಿ ಪಡೆದುಕೊಂಡದೆಷ್ಟು ಎಂಬುದರ ಕಡೆಗೆ ಗಮನ ಹರಿಸಬೇಕು.

ನಿಮ್ಮ ಹುಟ್ಟು, ಜಾತಿ, ಲಿಂಗವನ್ನು ಮರೆಸುವಂತೆ ಸಮಾಜದಲ್ಲಿ ಬೆಳೆಯಬೇಕು. ಜಾತಿಗಿಂತಲೂ ನಾವು ಪಡೆದುಕೊಳ್ಳುವ ಸ್ಥಾನಮಾನಗಳನ್ನು ನೋಡಿ ಸಮಾಜ ಗೌರವಿಸುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ಎಸ್.ಎಸ್. ತೇರದಾಳ ವಿದ್ಯಾರ್ಥಿಗಳು ತಮ್ಮ ಚಾರಿತ್ರ್ಯವನ್ನು ನಿರ್ಮಿಸಿಕೊಳ್ಳಬೇಕು. ತಮ್ಮ ಬೆಳವಣಿಗೆಗೆ ಬೇಕಾದ ಅಂಶಗಳನ್ನು ಪಡೆದುಕೊಂಡು ತಮ್ಮ ಬದುಕನ್ನು ಮಾದರಿಯಾಗಿಸಬೇಕು. ಆತ್ಮವಿಶ್ವಾಸ ಹೊಂದಿದ ಮಹಿಳೆ ಎಲ್ಲವನ್ನೂ ಮೀರಿ ಬೆಳೆಯಬಲ್ಲಳು ಎಂಬುದಕ್ಕೆ ಇಂದಿನ ಎಲ್ಲಾ ಕ್ಷೇತ್ರಗಳಲ್ಲಿನ ಅವಳ ಸಾಧನೆಯೇ ಸಾಕ್ಷಿ ಎಂದರು.


ವೇದಿಕೆಯಲ್ಲಿ ಡಾ. ಮುಕುಂದ ಮುಂಡರಗಿ, ಡಾ. ಸುಮನ್ ಮುದ್ದಾಪುರ, ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಉಪನ್ಯಾಸಕಿ ಅಶ್ವಿನಿ ಜವಳಿಮಠ ನಿರೂಪಿಸಿದರು. ಡಾ. ಶೋಭಾ ನಾಯಕ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಮಧುಶ್ರೀ ಕಳ್ಳಿಮನಿ ಸ್ವಾಗತಿಸಿದರು. ಡಾ. ಮಂಜುಳಾ ಕೆ. ವಂದಿಸಿದರು. ವಿದ್ಯಾರ್ಥಿನಿ ಕಲ್ಪನಾ ಮುಚ್ಚಂಡಿ ಪ್ರಾರ್ಥಿಸಿದರು. ಬೋಧಕ, ಬೋಧಕೇತರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 2023ಕ್ಕೆ ಮತ್ತೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ: ಮಾಜಿ ಶಾಸಕ ರಾಜು ಕಾಗೆ

ಮೋಳೆ : ಸುಳ್ಳು ಭರವಸೆಗಳ ಮೂಲಕ ಅಧಿಕಾರ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ, ಅನೈತಿಕವಾಗಿ ಹವಾಮಮಾರ್ಗವಾಗಿ ಬಂದು ರಾಜ್ಯದಲ್ಲಿ ಅಧಿಕಾರ ನಡೆಸುತ್ತರುವ ಬೊಮ್ಮಾಯಿ ಸರಕಾರಕ್ಕೆ ರಾಜ್ಯದ ಜನರು ಬುದ್ದಿ ಕಲಿಸುವ ಕಾಲ ಸನ್ನಿಹಿತವಾಗಿದ್ದು, 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿಆಡಳಿತ ಚುಕ್ಕಾಣಿ ಹಿಡಿಯುವಲ್ಲಿ ಯಾವುದೇ ಅನುಮಾನವಿಲ್ಲ ಎಂದು ಮಾಜಿ ಶಾಸಕ ರಾಜು ಕಾಗೆ ಹೇಳಿದರು,

ಕಾಗವಾಡ ಮತಕ್ಷೇತ್ರದ ವ್ಯಾಕ್ತಿಯಲ್ಲಿ ಬರುವ ಕೃಷ್ಣಾ ಕಿತ್ತೂರ ಗ್ರಾಮದಲ್ಲಿ ಮುಸ್ಲಿಂ ಸಮಾಜದವರು ಏರ್ಪಡಿಸಿದ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ನೀರಾವರಿ ಮಂಜೂರು ಮಾಡಿದ್ದೇ ಸಿದ್ದರಾಮಯ್ಯ:–1350 ಕೋಟಿ ರೂ ವೆಚ್ಚದ ಖಿಳೇಗಾಂವ ಬಸವೇಶ್ವರ ಏತ ನೀರಾವರಿ ಯೋಜನೆಗೆ ಮಂಜೂರಾತಿ ನೀಡಿದ್ದೇ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ. ಆಗ ನಾನು ಶಾಸಕನಾಗಿದ್ದೇ. ಮದಭಾವಿ ಗ್ರಾಮದಲ್ಲಿ ಯೋಜನೆಗೆ ಚಾಲನೆ ನೀಡಿದ್ದರು. ಆದರೆ ಈಗಿನ ಶಾಸಕರು ಬಸವೇಶ್ವರ ಏತ ನೀರಾವರಿ ಮಂಜೂರು ಮಾಡಿಸಿಕೊಂಡು ಬಂದಿರುವುದಾಗಿ ಹೇಳುತ್ತಿರುವುದು ಹಾಸ್ಯಾಸ್ಪದ ಎಂದು ರಾಜು ಕಾಗೆ ಲೇವಡಿ ಮಾಡಿದರು.




ಆರ್ಥಿಕತೆ 25 ವರ್ಷ ಹಿಂದಕ್ಕೆ ; ನೋಟು ಅಮಾನ್ಯಿಕರಣ, ಜಿ.ಎಸ್.ಟಿ. ಪ್ರೆಟ್ರೋಲ್,ಡಿಸೈಲ್,ಸಿಲೆಂಡರ್, ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ದೇಶದ ಆರ್ಥಿಕ ಸ್ಥಿತಿ ಅಧೋಗತಿಗೆ ಇಳಿದಿದೆ.

ಯುವ ಘಟಕದ ಅಧ್ಯಕ್ಷ ಪ್ರಶಾಂತ ಅಪರಾಜ ಸೂರ್ಯ ಚಂದ್ರ ಹುಟ್ಟುವುದು ಎಷ್ಟು ಸತ್ಯವೋ ಅಷ್ಟೇ 2023 ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ರಾಜು ಕಾಗೆ ಗೆಲುವು ಅಷ್ಟೇ ಸತ್ಯ ಎಂದರು.

ಈ ವೇಳೆ 'ಕಾಗವಾಡ ಬ್ಲಾಕ್ ಅಧ್ಯಕ್ಷ ವಿಜಯಕುಮಾರ ಅಕಿವಾಟೆ ಕಾಂಗ್ರೆಸ್ ಪಕ್ಷದ ತತ್ವ ಸಿದ್ದಾಂತಗಳ ಬಗ್ಗೆ ವಿವರವಾಗಿ ಮಾತನಾಡಿದರು. ಐನಾಪುರಪಟ್ಟಣ ಪಂಚಾಯತ್ ಸದಸ್ಯ ಅರುಣ ಗಾಣಿಗೇರ, ಯುವ ಘಟಕದ ಅಧ್ಯಕ್ಷ ಪ್ರಶಾಂತ ಅಪರಾಜ,ಕಲ್ಲಪ್ಪ ಕರಗಾರ, ಅಣ್ಣಾಸಾಬ ಜಾಯಗೌಡ, ವಿದ್ಯಾಧರ ಸುತಾರ, ಇಬ್ರಾಹಿಂ ಅಲಾಸೆ, ಗುರುಪಾದ ರಾಜು ಮುಜಾವರ, ಸೈಯ್ಯದ ಕುಡಚಿ, ರಮಜಾನ ಅಲಾಸೆ, ಮುನೀರ ಮುಜಾವರ, ಸರದಾರ ಅಲಾಸೆ, ಶ್ರೀಧರ ಕಾಂಬಳೆ, ಈಶ್ವರ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಎ.ಬಿ.ವಿ.ಪಿಯಿಂದ ಯೋಧ ನಮನ ಕಾರ್ಯಕ್ರಮ



ಹುಳಿಯಾರು: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹುಳಿಯಾರು ವತಿಯಿಂದ ಪುಲ್ವಾಮಾ ಹುತಾತ್ಮ ಯೋಧರ ಸ್ಮರಣಾರ್ಥ ಯೋಧ ನಮನ ಕಾರ್ಯಕ್ರಮವನ್ನು ಹುಳಿಯಾರು–ಕೆಂಕೆರೆ ಬಿಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಮಂಗಳವಾರ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ಫೆಬ್ರವರಿ 14, 2019 ರಂದು ಜಮ್ಮು ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಭದ್ರತಾ ಸಿಬ್ಬಂದಿಯನ್ನು ಸಾಗಿಸುವ ವಾಹನಕ್ಕೆ ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆಥ್ಪೊರದಲ್ಲಿ (ಅವಾಂತಿಪೋರಾ ಬಳಿ) ಆತ್ಮಹತ್ಯಾ ಬಾಂಬರ್ ವಾಹನದಿಂದ ದಾಳಿ ಮಾಡಲಾಯಿತು.

ಈ ದಾಳಿಯಿಂದಾಗಿ ಕೇಂದ್ರ ಮೀಸಲು 40 ಮಂದಿ ವೀರ ಯೋಧರು ಹುತಾತ್ಮರಾದರು. ಹಾಗಾಗಿ ಫೆ.14 ರಂದು ಯೋಧ ನಮನ ದಿನಾಚರಣೆ ಮಾಡಲಾಗುತ್ತಿದೆ.

ಈ ಕಾರ್ಯಕ್ರಮದಲ್ಲ ಎ.ಬಿ.ವಿ.ಪಿ ಚಿಕ್ಕನಾಯಕನಹಳ್ಳಿ ತಾಲೂಕು ಸಂಚಾಲಕ್ ಎಚ್.ಆರ್.ಗುರುಪ್ರಸಾದ್ ಮಾತನಾಡಿ ಫೆಬ್ರವರಿ 14 ಪ್ರೇಮಿಗಳ ದಿನವನ್ನಾಗಿ ಆಚರಿಸದೆ ದೇಶಕ್ಕೋಸ್ಕರ ಪ್ರಾಣವನ್ನು ಮುಡಿಪಾಗಿಟ್ಟಿರುವ ನಿಸ್ವಾರ್ಥತೆಯಿಂದ ದೇಶ ಸೇವೆ ಮಾಡುತ್ತಿರುವ ವೀರ ಯೋಧರಿಗಾಗಿ ದೇಶಪ್ರೇಮಿಗಳ ದಿನವನ್ನಾಗಿ ಎಲ್ಲಾ ಯುವಕರು ಆಚರಿಸೋಣ ಎಂದು ಸಂಕಲ್ಪ ಮಾಡಿದರು.

ಹಾಗೂ ಉಪನ್ಯಾಸಕರಾದ ನಾರಾಯಣ್ ರವರು ಒಂದು ಗೀತೆಯನ್ನು ಹೇಳುವ ಮೂಲಕ ಯೋಧರಿಗೆ ನಮನ ಸಲ್ಲಿಸಿದರು.

ಉಪನ್ಯಾಸಕರಾದ ನರೇಂದ್ರಬಾಬು, ಕುಮಾರಸ್ವಾಮಿ, ನಾರಾಯಣ್, ಚಂದ್ರಹಾಸ್, ಜಯಪ್ರಕಾಶ್, ಕಾರ್ಯಕರ್ತರಾದ ರಾಕೇಶ್ ಕೆಂಕೆರೆ, ಹರೀಶ್ ಎಸ್.ಎನ್ ಮತ್ತು ಗಿರೀಶ್, ಮಾಧ್ಯಮ ಪ್ರಮುಖ್ ದೀಪಕ್.ಕೆ, ನಗರ ಕಾರ್ಯದರ್ಶಿಯಾದ ಕಿರಣ್ ಎಂ,ಆರ್, ಮಾರುತಿ ಪಿ.ಎಸ್, ಸುಶ್ಮಿತಾ, ಕೋಮಲ, ಸುಮಿತ್ರ, ಪಲ್ಲವಿ, ಅಭಿಲಾಶ್. ಪ್ರಕಾಶ್. ಸಿದ್ದೇಶ್ ವೈ.ಕೆ, ನಂದನ್, ಮಲ್ಲಿಕಾರ್ಜುನ್, ಪವನ್ ಸಿ.ಪಿ,ಮಣಿ, ನಯಾಜ್, ದಿಲೀಪ್, ಮಾರುತಿ ಇನ್ನಿತರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಿಲ್ಲೆಯ ಅಭಿವೃದ್ಧಿಗೆ ದರ್ಶನ್ ಅವರ ಕೊಡುಗೆ ಅಪಾರ : ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅಭಿಮತ



ಬೆಳಗಾವಿ: ಜಿಲ್ಲೆಯಲ್ಲಿ ಸರ್ಕಾರಿ ಕಟ್ಟಡಗಳನ್ನು ಜನೋಪಯೋಗಿಯಾಗಿ ಹೇಗೆನಿರ್ಮಿಸಬೇಕು ಎಂಬುದನ್ನು ತೋರಿಸಿಕೊಟ್ಟ ನಿಕಟಪೂರ್ವ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್.ವಿ.ದರ್ಶನ್ ಅವರು, ಶಾಲಾ ಕಟ್ಟಗಳ ನಿರ್ಮಾಣ, ಶಾಲಾ ಕಾಂಪೌಂಡ್, ಶಾಲಾ ಶೌಚಾಲಯಗಳ ಸುಧಾರಣೆ, ನರೇಗಾ ಯೋಜನೆಯಡಿ ಕೆರೆ ತುಂಬಿಸುವ ಕಾರ್ಯ ಅಂಗನವಾಡಿ ಸುಧಾರಣೆ ಹೀಗೆ ಹತ್ತು ಹಲವು ಕೆಲಸಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಬೆಳಗಾವಿ ಜಿಲ್ಲೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ದಿದ್ದಾರೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಶ್ಲಾಘಿಸಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಸೋಮವಾರ(ಫೆ.13) ನಡೆದ ಸಮಾರಂಭದಲ್ಲಿ ಜಿಲ್ಲಾ ಪಂಚಾಯತ ನಿಕಟಪೂರ್ವ ಸಿಇಓ ದರ್ಶನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸತತವಾಗಿ ಮೂರು ವರ್ಷಗಳ ಕಾಲ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ ದರ್ಶನ್ ಅವರು, ತಮ್ಮದೇ ಆದ ಶೈಲಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಹಾಗೂ ವಿಶಿಷ್ಟ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

ಸದಾ ಜನಪರ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಅವರು, ಒಟ್ಟಾರೆ ಜಿಲ್ಲೆಯ ಪ್ರಗತಿಯ ನಿಟ್ಟಿನಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದಾರೆ.

ಅವರ ಜೊತೆಯಲ್ಲಿ ಕಳೆದ ದಿನಗಳು ಬಹಳ ಸುಂದರವಾಗಿದ್ದವು ಎಂದು ಸ್ಮರಿಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು, ಕೋವಿಡ್, ಪ್ರವಾಹ ಹಾಗೂ ಉತ್ಸವ ಮತ್ತಿತರ ಬೃಹತ್ ಕಾರ್ಯಕ್ರಮಗಳ ಸಂದರ್ಭದಲ್ಲಿ ದರ್ಶನ್ ಅವರ ಪಾತ್ರ ಬಹಳ ಮುಖ್ಯವಾಗಿತ್ತು ಎಂದು ಹೇಳಿದರು.

ನೂತನ ಸಿಇಓ ಭೋಯಾರ್ ಹರ್ಷಲ್ ಅವರು ಕೂಡ 3 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಆಗಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಅವರಿಗೂ ಎಲ್ಲರೂ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಹೇಳಿದರು.

ಇದೇ ವೇಳೆ ಮಾತನಾಡಿದ ಬೆಳಗಾವಿ ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ.ಬೋರಲಿಂಗಯ್ಯ ಅವರು, ದರ್ಶನ್ ಅವರ ಸರಳತೆ ಹಾಗೂ ಕರ್ತವ್ಯಪ್ರಜ್ಞೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಪಂಚಾಯತಿಯ ನಿಕಟಪೂರ್ವ ಸಿಇಓ ದರ್ಶನ್ ಅವರು, ಜಲಜೀವನ್ ಮಿಶನ್ ಯೋಜನೆಯಡಿ ಜಿಲ್ಲೆಯಲ್ಲಿ 5 ಲಕ್ಷ ಮನೆಗಳಿಗೆ ನೀರು ಒದಗಿಸಿರುವುದರಿಂದ ಮಹಿಳೆಯರಿಗೆ ಅನುಕೂಲವಾಗಿದೆ ಎಂದರು.

ನರೇಗಾ ಯೋಜನೆಯ ಅಡಿಯಲ್ಲಿ ರಸ್ತೆ, ಚರಂಡಿ, ನಿರ್ಮಾಣ ಮಾಡ್ತಿದ್ದರು; ಆದರೆ ಈಗ ಶಾಲಾ ಕಾಲೇಜುಗಳ ಕಟ್ಟಡಗಳ ಸುಧಾರಣೆ, ಕೆರೆ ತುಂಬವ ಕಾರ್ಯ, ಶೌಚಾಲಯ ನಿರ್ಮಾಣ, ಅಂಗನವಾಡಿ ಕಟ್ಟಡ ಸುಧಾರಣೆ ಮಾಡುವ ಮೂಲಕ ಬೆಳಗಾವಿ ಜಿಲ್ಲೆಯಲ್ಲಿ ರಚನಾತ್ಮಕ ಹಾಗೂ ಶಾಶ್ವತ ಕೆಲಸಗಳನ್ನು ಮಾಡುವ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನೂತನ ಸಿಇಓ ಭೋಯಾರ್ ಹರ್ಷಲ್ ಅವರನ್ನು ಸ್ವಾಗತಿಸಲಾಯಿತು.

ಬೀಳ್ಕೊಡುಗೆ ಸಮಾರಂಭದಲ್ಲಿ ಜಿಲ್ಲಾ ಪಂಚಾಯತ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಬಿಜೆಪಿ ಅಭ್ಯರ್ಥಿ ಅತ್ಯಧಿಕ ಮತಗಳಿಂದ ಐತಿಹಾಸಿಕ ಗೆಲವು ಬೈಲಹೊಂಗಲ ಕ್ಷೇತ್ರದಲ್ಲಿ ಆಗಲಿದೆ

ಬೈಲಹೊಂಗಲ: ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಅತ್ಯಧಿಕ ಮತಗಳಿಂದ ಐತಿಹಾಸಿಕ ಗೆಲವು ಬೈಲಹೊಂಗಲ ಕ್ಷೇತ್ರದಲ್ಲಿ ಆಗಲಿದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲಕುಮಾರ ಸುರಾನಾ ಹೇಳಿದರು.

ಪಟ್ಟಣದ ಇಂಜಿನಿಯರಸ್ಸ್ ಹಾಲ್ ನಲ್ಲಿ ಜರುಗಿದ ಮಂಡಲ ಪದಾಧಿಕಾರಿಗಳ ಚಿಂತನಾ ಸಭೆಯಲ್ಲಿ ಮಾತನಾಡಿ, ಈ ಹಿಂದೆ ಲೊಕಸಭೆಯಲ್ಲಿ 35ಸಾವಿರ ಲಿಡ್ ಪಡೆದರೆ ಅದೆ ಉಪ ಚುನಾವಣೆಯಲ್ಲಿ ಹಿಂದೆ ಬಿದ್ದಿದ್ದೆವೆ, ಆದರೆ ಬರುವ ಚುನಾವಣೆಯಲ್ಲಿ ಅವೆಲ್ಲವನ್ನು ಮರೆತು ಕಾರ್ಯಕರ್ತರು ಒಗ್ಗಟ್ಟಾಗಿ ಪಕ್ಷದ ಅಡಿಯಲ್ಲಿ ಕಾರ್ಯನಿರ್ವಹಿಸಿ ಪಕ್ಷ ಗೆಲುವು ಸಾಧಿಸುವವರೆಗೆ ವಿಶ್ರಮಿಸದೆ ಪರಿಶ್ರಮಿಸಬೇಕು. ಪಕ್ಷದಿಂದ ನೀಡಿದ ಬೂತ್ ವಿಜಯ ಅಭಿಯಾನ ಗೊಡೆ ಬರಹ ಹಾಗೂ ಕರ ಪತ್ರ ವಿತರಣೆ ಮಾಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ಮುಟ್ಟಿಸುವ ಕಾರ್ಯ ಮಾಡಬೇಕು. ದೇಶದ ಜನತೆಗೆ ಮೋದಿಯವರು ಹಗಲಿರಳು ದುಡಿಯುತಿದ್ದಾರೆ, ಮುಖ್ಯಮಂತ್ರಿಗಳು ಜನಪರ ಕಾರ್ಯಯೋಜನೆಜಾರಿಗೆ ತರುತಿದ್ದಾರೆ. ಪ್ರತಿ ಯೋಜನೆಯು ಸರ್ವ ವ್ಯಾಪಿ ಸರ್ವ ಸ್ಪರ್ಷಿಯಾಗಿದೆ.



ಫಲಾನುಭವಿಗಳ ಜೋತೆ ಸಂವಾದ ನಡೆಸಬೇಕು ಮನೆ ಮನೆಗೆ ಕಾರ್ಯಕರ್ತರು ತೆರಳಿದಾಗ ಮುಂದೆ ಮಾಡುವ ಕೆಲಸಗಳ ಬಗ್ಗೆ ಮಾಹಿತಿ ದೊರೆಯತ್ತದೆ ಎಂದರು.

ಪದಾಧಿಕಾರಿಗಳಿಂದ ಕ್ಷೇತ್ರದಲ್ಲಿ ನಡೆದ ಕಾರ್ಯಗಳು, ಮುಂದಿನ ದಿನಮಾನಗಳಲ್ಲಿ ಪಕ್ಷ ಕೈಗೊಳ್ಳಬೇಕಾದ ಕೆಲಸ ಹಾಗೂ ಪದಾಧಿಕಾರಿಗಳ ಸಲಹೆ ಸೂಚನೆ ಪಡೆದುಕೊಂಡರು.

ವೇದಿಕೆಯ ಮೇಲೆ ಜಿಲ್ಲಾ ಅಧ್ಯಕ್ಷ ಸಂಜಯ ಪಾಟೀಲ, ವಿಭಾಗ ಪ್ರಭಾರಿ ಚಂದ್ರಶೇಖರ ಕವಟಗಿ, ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ಅಕ್ಕಲಕೋಟ್, ಜಯಪ್ರಕಾಶ್ ಎಮ್.ಸಿ, ಕಾಡಾ ಅಧ್ಯಕ್ಷ ಡಾ.ವಿ.ಅಯ್ ಪಾಟೀಲ, ಮಾಜಿ ಶಾಸಕ ಜಗದೀಶ್ ಮೆಟಗುಡ್, ಗುರುಪಾದ ಕಳ್ಳಿ, ಸುಭಾಷ್ ಪಾಟೀಲ, ಸಂದೀಪ ದೇಶಪಾಂಡೆ, ಎಫ್.ಎಸ್.ಸಿದ್ದನಗೌಡರ ಇದ್ದರು.


ಕಾರ್ಯಕ್ರಮದಲ್ಲಿ ನಿಂಗಪ್ಪ ಚೌಡಣ್ಣವರ, ಗುರು ಮೆಟಗುಡ್, ರತ್ನಾ ಗೋಧಿ, ಬಸವರಾಜ ಬಂಡಿವಡ್ಡರ, ಪ್ರಶಾಂತ ಅಮ್ಮಿನಭಾವಿ,ಸಂತೋಷ ಹಡಪದ, ಪರ್ವತಗೌಡ ಪಾಟೀಲ, ಗೌಡಪ್ಪ ಹೊಸಮನಿ, ಲಕ್ಕಪ್ಪ ಕಾರ್ಗಿ, ಜಗದೀಶ್ ಬೂದಿಹಾಳ, ಶಿವಾನಂದ ಪೂಜೇರ, ಬಸವರಾಜ ಶಿಂತ್ರಿ, ರಮೇಶ ಯಲ್ಲಪ್ಪಗೌಡರ, ಮಲ್ಲಿಕಾರ್ಜುನ ದೇಸಾಯಿ, ಭರಮನಾಯಕ ಮಲ್ಲೂರ, ವಿದ್ಯಾ ರಾಮಣ್ಣವರ, ಇದ್ದರು.

ಜಗದೀಶ್ ಬೂದಿಹಾಳ ಸ್ವಾಗತಿಸಿ ವಾದಿಸಿದರು. ಸಿದ್ದಾರೋಡ ಹೊಂಡಪ್ಪನವರ ಕಾರ್ಯಕ್ರಮ ನಿರೂಪಿಸಿದರು.

## ಉತ್ತಮ ಸಂಸ್ಕಾರ, ಶಿಕ್ಷಣ ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಅಳವಡಿಕೋಳ್ಳಿ

ಮುಗಳಖೋಡ: ಭಾರತೀಯ ಸಂಸ್ಕೃತಿ, ಉತ್ತಮ ಸಂಸ್ಕಾರ, ಶಿಕ್ಷಣ ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಅಳವಡಿಕೊಳ್ಳಬೇಕು ಎಂದು ರಾಯಬಾಗ್ ಶಿಕ್ಷಣ ಸಂಯೋಜಕ ಶ್ರೀ ಎಸ್ ಆರ್ ಕಂಬಾರ್ ಹೇಳಿದರು.

ಅವರು ಪಟ್ಟಣದ ಮಹಾಕಾಳಿ ಶಿಕ್ಷಣ ಸಂಸ್ಥೆಯ ಶ್ರೀ ಯಲ್ಲಾಲಿಂಗ ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯ 7ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಭಾರತದಲ್ಲಿ ದಾನ, ಧರ್ಮವೂ ಕೂಡ ಒಂದು ಒಳ್ಳೆಯ ಸಂಸ್ಕಾರ ಮುಗಳಖೋಡ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತಹ ದಾನಿಗಳು ಹೆಚ್ಚಾಗಿ ಕಾಣಸಿಗುತ್ತಾರೆ. ಅಂತಹ ದಾನಿಗಳು ಶಾಲಾ ಉಪಕರಣಗಳನ್ನು ಕಾಣಿಕೆ ರೂಪದಲ್ಲಿ ಈ ಶಾಲೆಗೆ ನೀಡಿದ್ದು, ಶಾಲಾ ಸಿಬ್ಬಂದಿಯವರು ಅವುಗಳನ್ನ ದುರುಪಯೋಗ ಪಡಿಸಿಕೊಳ್ಳದೆ ಯಶಸ್ವಿಯಾಗಿ ಬಳಸಿಕೊಳ್ಳಿ ಎಂದು ಹೇಳಿದರು.



ದಾನಿಗಳಾದ ಮಹಾಂತೇಶ್ ಕುಲಿಗೋಡ, ಮಾರುತಿ ಅಕ್ಕೆನ್ನವರ್, ರಮೇಶ್ ವಡ್ಡರ್, ಆನಂದ್ ಕಾಂಬಳೆ, ಮಹಾಲಿಂಗ ವಜ್ರಮಟ್ಟಿ, ಮೌನೇಶ್ ಪತ್ತಾರ್, ಪೂಜಾ ಶಹಾ, ಸುಭಾನಲ್ಲ ಬಿದರಿ, ಎಸ್.ಎಸ್. ಬ್ಯಾಕೂಡ, ಸುನಿಲ್ ಆಸಂಗಿ, ಮುರೆಪ್ಪ ಶೇಗುಣಸಿ, ಎಸ್ ಕೆ ಪಾಟೀಲ್, ರಮೇಶ್ ಮಾಳಗಿ ಸೇರಿದಂತೆ ಮುಂತಾದ ದಾನಿಗಳನ್ನು ಹಾಗೂ ಮುಖ್ಯೋಪಾಧ್ಯಾಯ ಆರ್.ಆರ್. ಮೈಶಾಳೆ ಅವರನ್ನು ಸತ್ಕರಿಸಿ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮವನ್ನು ಗೋಪಾಲ್ ಬೆಕ್ಕೇರಿ ನಿರೂಪಿಸಿ ಆರ್ ಆರ್ ಮೈಶಾಲಿ ಸ್ವಾಗತಿಸಿ ವಂದಿಸಿದರು.

BELAGAVI VARADI KANNADA DAILY MORNING : Editor, Printer, Publisher & Owned By : Satish Basavani Gudagenatti, Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089